ಕರ್ನಾಟಕ ಸರ್ಕಾರ

# ಕರ್ನಾಟಕ ವಿಕಾಸ

## KARNATAKA VIKAS

ಮಾರ್ಚ್ MARCH 2015




**ದಿನಾಂಕ : 18.2.2015ರಂದು ನವದೆಹಲಿಯಲ್ಲಿ ನಡೆದ ರಾಜ್ಯ ಮಂತ್ರಿಗಳ ಸಮ್ಮೇಳನದಲ್ಲಿ ಮಾನ್ಯ ಗ್ರಾ.ಅ.&ಪಂ.ರಾಜ್ ಸಚಿವರದ ಶ್ರೀ ಎಚ್.ಕೆ. ಪಾಟೀಲ ರವರು ಭಾಗವಹಿಸಿ ಸಮ್ಮೇಳನ ಕುರಿತು ಮಾತನಾಡುತ್ತಿರುವುದು.**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ
ಗ್ರಾಮೀಣ ಕುಡಿಯುವ ನೀರು ಸ್ವಚ್ಛ ಭಾರತ ಅಭಿಯಾನ ಮತ್ತು ನರೇಗಾ ಯೋಜನೆಯ ಕುರಿತು
ದಿನಾಂಕ:21.2.2015ರಂದು ಮಾನ್ಯ ಗ್ರಾ.ಅ.&ಪಂ.ರಾಜ್. ಸಚಿವರು ಪತ್ರಿಕಾಗೋಷ್ಠಿ ನಡೆಸಿದರು



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ
2015–16ನೇ ಸಾಲಿನ ಅಯವ್ಯಯ ಪೂರ್ವಭಾವಿ ಸಭೆಯನ್ನು ಇಲಾಖೆಯ ಅಧಿಕಾರಿಗಳೊಂದಿಗೆ
ದಿನಾಂಕ:24.2.2015ರಂದು ಮಾನ್ಯ ಗ್ರಾ.ಅ.&ಪಂ.ರಾಜ್. ಸಚಿವರು ನಡೆಸಿದರು



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಮಾರ್ಚ್ 2015 | ಸಂಪುಟ: 56
March 2015 | Volume: 56
ಸಂಚಿಕೆ : 04
Issue : 04

## ಈ ಸಂಚಿಕೆಯೊಳಗೆ

5. ಸಚಿವಾಲಯದಿಂದ ಸಂದೇಶ
7. ವರದಿ – ಶ್ರೀ ತುಕಾರಾಂರಾವ್ ಬಿ.ವಿ.
12. ಅಭಿವೃದ್ಧಿ ಅಧಿಕಾರಗಳ ಅಂಗಳದಿಂದ – ಶ್ರೀ ಸತೀಶ್ ಬಿ. ಸುಣಗಾರ್
15. ಲೇಖನ – ಪ್ರೊ: ಎ.ಎಚ್. ಮಾಸಾಪತಿ
– ಶ್ರೀ ಬಸವರಾಜಯ್ಯ ಡಿ.ಎಂ.
– ಡಾ. ಎಂ.ಡಿ. ಉಮೇಶ
26. ಕಾವ್ಯ ವಿಕಾಸ – ಶ್ರೀ ಜಿ.ವೆಂಕಟೇಶ್
27. ಯಶೋಗಾಥೆ – ಶ್ರೀ ನಾಗರಾಜ ಆರ್.ಎಚ್.
30. ಕವಿಯ(ಕ್ವ) ಪ್ರಶ್ನ – ಶ್ರೀ ಗಂಗರಾಜು ಎಂ.
31. ಘೋಷ್ವಾರೆ
32. ಪಂಚತಂತ್ರ ವರದಿ
33. ಸಕಾಲ ವರದಿ
34. ಸುತ್ತೋಲೆಗಳು




ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**

**ವಾರ್ಷಿಕ ಚಂದಾ**
ವ್ಯಕ್ತಿಗಳಿಗೆ ರೂ. 100/-
ಸಂಸ್ಥೆಗಳಿಗೆ ರೂ 120/-
ಬಿಡಿ ಪ್ರತಿ ರೂ. 10/-
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು

**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080-22353857
www.rdpr.kar.nic.in
email : kvrdpr@gmail.com

**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಫೆಬ್ರವರಿ 2015ರ 'ಕರ್ನಾಟಕ ವಿಕಾಸ' ಓದಿ ತುಂಬಾ ಸಂತೋಷವಾಯಿತು. ಒಳ–ಹೊರ ಪುಟ, ಆಕರ್ಷಕ ಲೇಖನಗಳೂ ರೋಚಕ. ಕುಮಾರಿ ಕೆ.ಎ.ಕುರುಬರ ರಚಿತ "ಕೇಂದ್ರ ಸ್ಥಾನದಲ್ಲಿ ವಾಸಿಸು" ಸಕಾಲಿಕ ಲಿಪಿಕವರ್ಗದ ಧ್ವನಿ. ಸೋಪೋಜ್ಞತೆಯಿಂದ ಗಮನಾರ್ಹ. ಒಂದು ಹನಿ ಮಸಿ, ಕೋಟಿ ಜನಕೆ ಬಿಸಿ ಕವನ ಧನಾತ್ಮಕತೆಯ ರಸಭಾವವನ್ನು ಸೃಜಿಸುತ್ತದೆ. ಇಂಥ ಲೇಖನಗಳನ್ನು ಪ್ರಕಟಿಸಿದ ತಮಗೂ, ಬರೆದವರಿಗೂ ಧನ್ಯವಾದಗಳು.

**ಶ್ರೀ ನಿಂಗಯ್ಯ ಒಡೆಯರ**
ಮೈಲಾರಗುಡ್ಡ, ಹೊಸಬಡಾವಣೆ, ಅಮೀನಗಡ ರಸ್ತೆ,
ಗುಡೂರ (ಎಸ್.ಸಿ), ಹುನಗುಂದ ತಾಲ್ಲೂಕು, ಬಾಗಲಕೋಟೆ 587202.

ಫೆಬ್ರವರಿ 2015ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸಂಗ್ರಹ ಯೋಗ್ಯ ಸಂಚಿಕೆ. ಭರಪೂರ ಮಾಹಿತಿಗಳ ಸಂಗ್ರಹ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವ ಕುರಿತು ಅಗಾಧವಾದ ಕಾಳಜಿಯನ್ನು ಹೊಂದಿದ "ಸ್ವಚ್ಛ ಗ್ರಾಮೀಣ ಅಭಿಯಾನ ಸಂಚಿಕೆ" ಎಂದೆ ಹೇಳಬೇಕು. ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಲು ಗ್ರಾಮೀಣ ಜನತೆಗೆ ಇನ್ನೂ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಮಾತ್ರ ಆಗದು. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ಮತ್ತು ತಮ್ಮದೇ ಸ್ವಂತ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಮತ್ತು ಬಳಸಿಕೊಳ್ಳಲು ಜನತೆ ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕಿದೆ. ಇದಕ್ಕಾಗಿ ಸಿಬ್ಬಂದಿಗಳಿಗೆ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳು, ತರಬೇತಿ, ಮೇಳ, ಬೀದಿ ನಾಟಕ, ಪ್ರತಿ ವಾರ್ಡ್ ಅಥವಾ ಕಾಲೋನಿಗಳಲ್ಲಿ ಜಾಗೃತಿ ಸಭೆ ನಡೆಸುವುದು, ಶಾಲಾ ಮಕ್ಕಳಿಂದ ಭಾಷಣ, ಪ್ರಬಂಧ ಸ್ಪರ್ದೆ, ಚಿತ್ರ ಬಿಡಿಸುವ ಸ್ಪರ್ದೆ ಮೂಲಕ ಜಾಗೃತಿ ಮೂಡಿಸುವುದು ಸೂಕ್ತ ಎನಿಸುತ್ತದೆ. ಇದಕ್ಕೆ ಕೇವಲ ಇಲಾಖೆಯ ಸಿಬ್ಬಂದಿಗಳಲ್ಲದೇ ಸ್ವಯಂ ಸೇವಾ ಸಂಸ್ಥೆಗಳು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಸಹಾಯಕರು, ಕೃಷಿ ಇಲಾಖೆಯ ಅನುವುಗಾರರು ಮತ್ತು ಸ್ವಚ್ಛ ಸಮಾಜದ ಬಗ್ಗೆ ಕಳಕಳಿ ಇರುವ ಸಾರ್ವಜನಿಕರು ಸೇರಿಕೊಂಡು ಗ್ರಾಮ ಮಟ್ಟದ ಸಮಿತಿಗಳನ್ನು ರಚಿಸಿ, ಪ್ರತಿ ಮನೆ ಮನೆಗೂ ಭೇಟಿ ನೀಡಿ ಶೌಚಾಲಯದ ಬಗ್ಗೆ ತಿಳುವಳಿಕೆ ನೀಡುವುದು. ಗ್ರಾಮದ ಪ್ರತಿ ವಾರ್ಡ್‌ನಲ್ಲಿ ಶೌಚಾಲಯ ನಿರ್ಮಾಣ ಮತ್ತು ಬಳಕೆ ಬಗ್ಗೆ ಬ್ಯಾನರ್/ಫ್ಲೆಕ್ಸ್ ಅಳವಡಿಸುವುದು ಅಲ್ಲದೇ, ಗ್ರಾಮ ಮಟ್ಟದ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವ ಜನತೆಗೆ ಶೌಚಾಲಯದ ಮಹತ್ವದ ಕುರಿತು ಮಾರ್ಗದರ್ಶನ ನೀಡುವುದು, ಶಾಲೆಗಳಲ್ಲಿ ಮಕ್ಕಳ ಎದುರಿನಲ್ಲಿ ಪೋಷಕರೊಂದಿಗೆ ಶೌಚಾಲಯದ ಬಳಕೆ ಕುರಿತು ತಿಳುವಳಿಕೆ ನೀಡುವುದು ಮಾಡಿದಲ್ಲಿ ಸರ್ಕಾರದ ಆಶಯದಂತೆ ಸ್ವಚ್ಛ ಭಾರತದ ಕನಸು ನನಸಾಗುವಂತೆ ಮಾಡುವುದು ಸುಲಭ.

ಕಾವ್ಯ ವಿಕಾಸದಡಿ "ಕೇಂದ್ರಸ್ಥಾನದಲ್ಲಿ ವಾಸಿಸು" ಕವನದ ಪ್ರತಿಯೊಂದು ಸಾಲೂ ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳು ಅರ್ಥ ಮಾಡಿಕೊಂಡು ಆಚರಣೆಗೆ ತರಬೇಕಿದೆ.

ಪ್ರತಿ ಸಂಚಿಕೆಯಲ್ಲಿ ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳ ಯಶೋಗಾಥೆಗಳು, ಸಾಧನೆಗಳ ವರದಿ ಪ್ರಕಟವಾಗುತ್ತಿದ್ದು, ಪತ್ರಿಕೆಯನ್ನು ಗ್ರಾಮೀಣ ಜನತೆ ಮತ್ತು ಪ್ರತಿ ಗ್ರಾಮ ಪಂಚಾಯಿತಿಯ ಸದಸ್ಯರು ತೀವ್ರ ಆಸಕ್ತಿಯಿಂದ ಓದುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂದಿನ ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗಬಹುದಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಬಳಕೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ವಿವಿಧ ಲೇಖನಗಳು ಪ್ರಕಟವಾಗುವುದೆಂಬ ಆಶಯ ಹೊಂದಿರುತ್ತೇನೆ.

**ಶ್ರೀ ಸದಾನಂದ ಎಲ್,**
# 1652/ಡಿ 16, ಕೃಷ್ಣ ಕುಂಜ್, ಆಂಜನೇಯ ಬಡಾವಣೆ,
14ನೇ ತಿರುವು, ದಾವಣಗೆರೆ 577003.

# ಸಚಿವಾಲಯದಿಂದ ಸಂದೇಶ



**ಟಿ.ಎಂ. ವಿಜಯಭಾಸ್ಕರ್,** ಭಾ.ಆ.ಸೇ
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಬಹುಮಹಡಿ ಕಟ್ಟಡ, ಬೆಂಗಳೂರು.**

## "ಗ್ರಾಮ ವಿಕಾಸ" ಯೋಜನೆ:

ರಾಜ್ಯವು ಸುವರ್ಣ ಮಹೋತ್ಸವದ ಆಚರಣೆಯ ಸುಸಂದರ್ಭದಲ್ಲಿ "ಸುವರ್ಣ ಗ್ರಾಮೋದಯ ಯೋಜನೆ"ಯನ್ನು 2006-07ನೇ ಸಾಲಿನಲ್ಲಿ ಆರಂಭಿಸಿ ಐದು ಹಂತದ ಯೋಜನೆಯನ್ನು ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯದಲ್ಲಿ ಘೋಷಿಸಿದಂತೆ ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2014-15ನೇ ಸಾಲಿನಲ್ಲಿ "ಗ್ರಾಮ ವಿಕಾಸ" ಎಂಬ ಯೋಜನೆಯನ್ನು ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಅನುಷ್ಠಾನಕ್ಕೆ ತರಲಾಗಿದೆ.

## ಯೋಜನೆಯ ಉದ್ದೇಶಗಳು:

- ಆಯ್ಕೆಯಾದ ಗ್ರಾಮಗಳ ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸಿ ಗ್ರಾಮೀಣ ಮೂಲ ಸೌಕರ್ಯಗಳನ್ನು ಒದಗಿಸುವುದು.
- ಸ್ವಚ್ಛತೆ, ನೈರ್ಮಲ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡಿ, 2 ವರ್ಷದ ಅವಧಿಯಲ್ಲಿ ಬಯಲು ಬಹಿರ್ದೆಶೆ ಮುಕ್ತ ಗ್ರಾಮವನ್ನಾಗಿ ಪರಿವರ್ತಿಸುವುದು.
- ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಕಟ್ಟಡಗಳನ್ನು ಒದಗಿಸುವುದು.
- ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಪ್ರದೇಶಗಳಲ್ಲಿ ಅಗತ್ಯತೆ ಆಧರಿಸಿ ಕಟ್ಟಡಗಳನ್ನು ಒದಗಿಸಿ ಮೂಲ ಸೌಕರ್ಯ ಕಲ್ಪಿಸುವುದು ಆದ್ಯತೆಯನ್ನು ನೀಡಲಾಗುವುದು.

ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸಲು ಸ್ವಯಂ ಉದ್ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

## ಗ್ರಾಮಗಳ ಆಯ್ಕೆ

ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮ ಸೇರಿ ಒಟ್ಟು 5 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಸಾಧಿಸಲು 3 ವರ್ಷದ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಅದಕ್ಕಾಗಿ 2011ರ ಜನಸಂಖ್ಯೆಯನ್ನು ಆಧರಿಸಿ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಗರಿಷ್ಠ 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗ್ರಾಮದ ಅಭಿವೃದ್ಧಿಗೆ ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಒಟ್ಟು 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಟ ರೂ.3.75 ಕೋಟಿಗಳನ್ನು ಹಂಚಿಕೆ ಮಾಡಿ ಸುಮಾರು 1000 ಗ್ರಾಮಗಳಲ್ಲಿ ಒಟ್ಟು ರೂ.750.00 ಕೋಟಿಗಳ ಅಂದಾಜಿನಲ್ಲಿ ಗ್ರಾಮ ವಿಕಾಸ ಯೋಜನೆಯ ಕಾರ್ಯಕ್ರಮಕ್ಕೆ ಅನುಷ್ಠಾನಕ್ಕೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಆದೇಶದ ಪ್ರತಿಯನ್ನು ಈ ಸಂಚಿಕೆಯ ಸುತ್ತೋಲೆ ವಿಭಾಗದಲ್ಲಿ ಗಮನಿಸಬಹುದಾಗಿದೆ.

## ಅನುದಾನ :

ಅದಕ್ಕಾಗಿ 2011ರ ಜನಸಂಖ್ಯೆಯನ್ನು ಆಧರಿಸಿ ಆಯ್ಕೆಯಾಗುವ ಪ್ರತಿ ಗ್ರಾಮದ ಜನಸಂಖ್ಯೆ ಸುಮಾರು 1000 ಇರುವಂತೆ ಮತ್ತು ಆಯ್ಕೆಯಾಗುವ ಗ್ರಾಮದ ಅಭಿವೃದ್ಧಿಗೆ ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮಕ್ಕೆ ರೂ.0.75 ಕೋಟಿ ಅನುದಾನ ನಿಗಧಿಪಡಿಸಲಾಗಿದೆ. ಪ್ರತಿ ಗ್ರಾಮೀಣ ಮತಕ್ಷೇತ್ರಕ್ಕೆ ಗರಿಷ್ಟ 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಟ ರೂ.3.75 ಕೋಟಿಗಳು ಹಂಚಿಕೆ ಮಾಡಲಾಗಿದೆ.

## ಒಗ್ಗೂಡಿಸುವ ಇತರೆ ಇಲಾಖಾ ಕಾರ್ಯಕ್ರಮಗಳು

ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖಾ ವತಿಯಿಂದ ಅನುಷ್ಠಾನದಲ್ಲಿರುವ 21 ಅಂಶಗಳ ಕಾರ್ಯಕ್ರಮ ಎಂಜಿಎನ್‌ಆರ್‌ಇಜಿಎ, ಸ್ವಚ್ಛ ಭಾರತ ಮಿಷನ್ (ನಿರ್ಮಲ್ ಭಾರತ್ ಅಭಿಯಾನ), ಸಂಜೀವಿನಿ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳಲ್ಲಿ ದೊರೆಯಬಹುದಾದ ಅನುದಾನದೊಂದಿಗೆ ಒಗ್ಗೂಡಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಆದರೆ ಯಾವುದೇ ಕಾರಣಕ್ಕೂ ಯಾವುದೇ ವ್ಯಕ್ತಿಯ ಹೆಸರಿನ ಅಥವಾ ವೈಯಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದು ಅಥವಾ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾದ ಗ್ರಾಮ ವಿಕಾಸ ಯೋಜನೆಯನ್ನು ಪಾರದರ್ಶಕತೆ ಹಾಗೂ ಬದ್ಧತೆಯಿಂದ ಸ್ಥಳೀಯ ಮಟ್ಟದಲ್ಲಿ ಸಮರ್ಪಕವಾಗಿ ಜಾರಿಗೊಳಿಸಿ ಯೋಜನೆಯ ಸದುದ್ದೇಶಗಳನ್ನು ನಮ್ಮೆಲ್ಲಾ ಅಧಿಕಾರಿ ಸಿಬ್ಬಂದಿ, ಚುನಾಯಿತ ಪ್ರತಿನಿಧಿಗಳ ಸಹಕಾರದೊಂದಿಗೆ ಸಾಕಾರಗೊಳಿಸುತ್ತೀರೆಂಬ ಆಶಾಭಾವನೆ ನನ್ನದು.

(ಟಿ.ಎಂ. ವಿಜಯಭಾಸ್ಕರ್)

ವರದಿ

# ಮಹಿಳಾ ಗುಂಪುಗಳಿಗಾಗಿ ಸ್ವಾವಲಂಬನೆ ಜೀವನ ಹಾಗೂ ಸಶಕ್ತೀಕರಣದ ಚಿಂತನೆ –ಸಂಜೀವಿನಿ


ತುಕಾರಾಂರಾವ್ ಬಿ.ವಿ.



ತುಕಾರಾಂರಾವ್ ಬಿ.ವಿ.

**ಕರ್ನಾಟಕ ಸರ್ಕಾರದ ಯುವ ಕ್ರೀಡ ಇಲಾಖೆ ಮತ್ತು ಗ್ರಾ.ಅ&ಪಂ.ರಾಜ್ ಇಲಾಖೆಯ ಸಂಜೀವಿನಿ (KSRLPS) ಸಹಭಾಗಿತ್ವದಲ್ಲಿ ಸ್ವಾಮಿ ವಿವೇಕಾನಂದರ 152ನೇ ಜನ್ಮ ದಿನಾಚರಣೆಯನ್ನು ವಿಜೃಂಬಣೆಯಿಂದ ಆಚರಿಸಲಾಯಿತು.**

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಯುವಕ–ಯುವತಿಯರಿಗೆ ಪ್ರೇರಣೆ ಈ ದಿನವನ್ನು ಭಾರತ ದೇಶದಲ್ಲಿ ಯುವ ಜನರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಯುವ ಜನರ ಆದರ್ಶ ವ್ಯಕ್ತಿಯಾಗಿ ನೆಲೆ ನಿಂತವರು ಸ್ವಾಮಿ ವಿವೇಕಾನಂದರು ಅವರ 'ಏಳಿ ಎದ್ದೇಳಿ, ಜಾಗೃತರಾಗಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎನ್ನುವ ಸಂದೇಶದ ಜೊತೆಗೆ ಇಂದು ನಾವು ಏನಾಗಿರುವೆವೋ ಅದಕ್ಕೆ ನಾವೆ ಹೊಣೆ, ನಾವು ಏನಾಗಬೇಕೆಂದು ನಮ್ಮ ಇಚ್ಛೆಯಿರುವುದೋ ಹಾಗಾಗಲು ಶಕ್ತಿಯು ನಮ್ಮಲ್ಲಿಯೇ ಇರುವುದು. ಆದ್ದರಿಂದಾಗಿ ದೇಶವು ಸ್ವಾವಲಂಭಿಯಾಗುವುದರ ಅಗತ್ಯವನ್ನು ಅಂದರೆ ಸ್ತ್ರೀಯರ ಶಿಕ್ಷಣ ಮತ್ತು



ಸ್ವಾತಂತ್ರ್ಯದ ಬಗ್ಗೆ ಹಾಗೂ ಯುವ ಜನರು ಸ್ವಾವಲಂಭಿಗಳಾಗುವ ಅಗತ್ಯತೆಯ ಬಗ್ಗೆ ಗಮನ ಹರಿಸಿದಲ್ಲಿ ದೇಶವು ಸ್ವಾವಲಂಬಿಯಾಗುತ್ತದೆ ಹಾಗೂ ದೇಶವು ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ ಎಂದು ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಜೊಯಿಡಾ, ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಮಹಿಳಾ ಗುಂಪುಗಳು ಮತ್ತು ಯುವಜನರಿಗಾಗಿ ಯುವ ಸಪ್ತಾಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಸಂಧರ್ಭದಲ್ಲಿ ತಜ್ಞರು–ಗಣ್ಯರ ಹಂಚಿಕೊಂಡ ಅನಿಸಿಕೆ.

ಕರ್ನಾಟಕ ಸರ್ಕಾರದ ಯುವ ವ್ಯವಹಾರ, ಕ್ರೀಡಾ ಇಲಾಖೆಯು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಹಯೋಗತ್ವದಲ್ಲಿ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ

* ಜಿಲ್ಲಾ ವಾರ್ತಾಧಿಕಾರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ–583231 ಮೊ: 9986912507

152ನೆ ಜಯಂತಿಯ ಅಂಗವಾಗಿ 12ನೇ ಜನವರಿ ಯಿಂದ 19ನೇ ಜನವರಿ ವರೆಗೆ ಯುವ ಸಪ್ತಾಹ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ನೆಹರು ಯುವ ಕೇಂದ್ರಗಳ ಮೂಲಕ ಹಮ್ಮಿಕೊಳ್ಳಲಾಗಿತ್ತು.

ನೆಹರು ಯುವ ಕೇಂದ್ರ ಹಾಗೂ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ರವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ವಿವಿದ ತಾಲ್ಲೂಕಿನ ಗ್ರಾಮದ ಯುವಕ-ಯುವತಿಯರಿಗೆ, ಮಹಿಳಾ ಸ್ವ ಸಹಾಯ ಸಂಘದ ಸದಸ್ಯರಿಗೆ ಸ್ವಾಮಿ ವಿವೇಕಾನಂದ ಜಯಂತಿಯ ಯುವ ಸಪ್ತಾಹದ ಅಂಗವಾಗಿ ಸ್ವಾವಲಂಬನೆ ಜೀವನ ಹಾಗೂ ಮಹಿಳಾ ಸಶಕ್ತೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

## ಯಲ್ಲಾಪುರ

ದಿನಾಂಕ 17-1-2015ರಂದು ಯಲ್ಲಾಪುರ ತಾಲ್ಲೂಕಿನ ಕುಂದರಗಿ ಗ್ರಾಮ ಪಂಚಾಯತಿಯ ಸ್ತ್ರೀ ಶಕ್ತಿ ಭವನದಲ್ಲಿ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ, ತಾಲ್ಲೂಕು ಪಂಚಾಯತ್ ಸಂಜೀವಿನಿ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ ಯಲ್ಲಾಪುರ ಹಾಗೂ ನೆಹರು ಯುವ ಕೇಂದ್ರ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 152ನೇ ಜಯಂತಿಯ ಯುವ ಸಪ್ತಾಹದ ಅಂಗವಾಗಿ ಕುಂದರಗಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಯುವಕ-ಯುವತಿಯರಿಗೆ ಹಾಗೂ ಸ್ವ -ಸಹಾಯ ಸಂಘದ ಮಹಿಳೆಯರಿಗಾಗಿ "ಸ್ವಾವಲಂಬನೆ ಜೀವನ ಹಾಗೂ ಮಹಿಳಾ ಸಶಕ್ತೀಕರಣ "ದ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬೆಳಕು ಸ್ವ ಸಹಾಯ ಸಂಘದ ಸದಸ್ಯರಾದ ವತ್ಸಲಾ ನಾಯ್ಕ ಪ್ರಾರ್ಥನೆ ಹೇಳುವುದರ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಸಂಜೀವಿನಿ



ಯೋಜನೆಯ ಯಲ್ಲಾಪುರ ತಾಲ್ಲೂಕು ಸಮೂಹ ಮೇಲ್ವಿಚಾರಕರಾದ ರಾಮಣ್ಣ ಪನ್ನೇರ (ಸಾಮಾಜಿಕ ಅಭಿವೃದ್ಧಿ ಮತ್ತು ಸಂವಹನ) ಕಾರ್ಯಕ್ರಮಕ್ಕೆ ಆಗಮಿಸಿದಂತ ಗಣ್ಯರನ್ನು ಸ್ವಾಗತಿಸಿದರು. ಪ್ರಾಸ್ತವಿಕವಾಗಿ ಮಂಜಣ್ಣ ಬಿ. ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಇವರು ಸ್ವಾಮಿ ವಿವೇಕಾನಂದರ ಜೀವನಶೈಲಿ ಹಾಗೂ ಆದರ್ಶಗಳನ್ನು ಯುವಕ ಯುವತಿಯರು ಹಾಗೂ ಸ್ವ ಸಹಾಯ ಸಂಘದ ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಸ್ವಾವಲಂಬನಾ ಜೀವನ ನಡೆಸಲು ಸಾದ್ಯ ಎನ್ನುವ ಮುಖಾಂತರ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯತನ ಅಧ್ಯಕ್ಷರಾದ ಶ್ರೀಮತಿ ಪಾರ್ವತಿ ನಾಯ್ಕ ಜ್ಯೋತಿ ಬೆಳಗಿಸುವ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಇಂದಿನ ಯುವ ಪೀಳಿಗೆ ವಿವೇಕಾನಂದರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಸಮುದಾಯುವನ್ನು ಮುನ್ನಡೆಸಬೇಕೆಂದು ಕರೆಕೊಟ್ಟರು.

ಅದೇ ರೀತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಗ್ರಾಮ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು ಯುವ ಜನತೆ ವಿವೇಕಾನಂದರ ಆದರ್ಶಗಳನ್ನು ಅಳವಡಿಸಿಕೊಂಡು ಸರಕಾರದ ಸೌಲಭ್ಯ ಪಡೆದುಕೊಂಡಲ್ಲಿ ಸಮೃದ್ಧ ಭಾರತ ಮಾಡುವಲ್ಲಿ ಸಹಕಾರಿ ಎಂದು ತಿಳಿಸಿದರು. ಹಾಗೂ ಸ್ವ- ಸಹಾಯ



ಸಂಘದ ಮಹಿಳೆಯರು ಕೇವಲ ಸ್ವ-ಸಹಾಯ ಸಂಘದಲ್ಲಿ ಹಣವನ್ನು ಉಳಿತಾಯ ಮಾಡಿ ಸಾಲ ಪಡೆಯುವುದಕಷ್ಟೇ ಸೀಮಿತವಾಗಿರದೆ ಪಡೆದ ಸಾಲದಿಂದ ಏನಾದರೊಂದು ಆದಾಯೋತ್ಪನ್ನ ಚಟುವಟಿಕೆಯನ್ನು ನಡೆಸಿ ಸ್ವಾವಲಂಬನೆ ಜೀವನ ನಡೆಸಬೇಕೆಂದು ಕರೆ ನೀಡಿದರು.

ಶಾಲಾ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಪ್ರೇಮಾವತಿ ಭಟ್ಟ ಮಾತನಾಡಿ ವಿವೇಕಾನಂದರು ಹೇಳಿದಂತೆ ಎಲ್ಲ ಧರ್ಮಕ್ಕಿಂತ ಮಾನವ ಧರ್ಮ ದೊಡ್ಡದಾಗಿದ್ದು ನಾವುಗಳು ಜಾತಿ, ಧರ್ಮಗಳ ಬೇಧವನ್ನು ಮರೆತು ಸ್ವ-ಸಹಾಯ ಸಂಘದಲ್ಲಿ ಒಟ್ಟಾಗಿ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಬೇಕು. ಈ ದಿಸೆಯಲ್ಲಿ ಸಂಜೀವಿನಿ ಯೋಜನೆಯ ನಮ್ಮೊಂದಿಗಿದ್ದು, ತಾವುಗಳು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಹಿಳೆಯರಿಗೆ ಕರೆಕೊಟ್ಟರು.

ಸಮೂಹ ಮೇಲ್ವಿಚಾರಕರಾದ ಶ್ರಿ ರಾಮಣ್ಣ ಪನ್ನೇರ ಇವರು ಮಾತನಾಡಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ "ಮಹಿಳಾ ಸಶಕ್ತೀಕರಣ ಮತ್ತು ಸ್ವಾವಲಂಬನೆ ಜೀವನ"ದ ಕುರಿತು ಮಾತನಾಡುತ್ತಾ ಸ್ವ-ಸಹಾಯ ಸಂಘದಲ್ಲಿ ಮಹಿಳೆಯರು ಕೇವಲ ಉಳಿತಾಯ ಮತ್ತು ಸಾಲಕ್ಕೆ ಜೋತು ಬೀಳದೆ ಇರುವ ಸಂಜೀವಿನಿ ಯೋಜನೆ ಹಾಗೂ ರಾಜೀವಗಾಂಧಿ ಚೈತನ್ಯ ಯೋಜನೆಯ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಆದಾಯೋತ್ಪನ್ನ ಚಟುವಟಿಕೆ ಮಾಡುವುದರ ಮುಖಾಂತರ ಆರ್ಥಿಕವಾಗಿ ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳನ್ನ ಅಳವಡಿಸಿ ಕೊಳ್ಳುವ ಮುಖಾಂತರ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿ ಕುಟುಂಬದ ಹಾಗೂ ಗ್ರಾಮದ ಸಮಗ್ರ ಅಭಿವೃದ್ಧಿ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಕೊನೆಯಲ್ಲಿ ಸಮುದಾಯ ಸಮುದಾಯ ಸಂಪನ್ಮೂಲ ವ್ಯಕ್ತಿಯಾದ ಕುಮಾರಿ ಸ್ವಾತಿ ಇವರು ವಂದನಾರ್ಪಣೆ ಮಾಡಿದರು. ಸಮೂಹ ಮೇಲ್ವಿಚಾರಕರಾದ ರಾಮಣ್ಣ ಇವರು ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಕುಂದರಗಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪಾರ್ವತಿ ನಾಯ್ಕ, ಗ್ರಾಮ ಪಂಚಾಯತ ಉಪಾಧ್ಯಕ್ಷರು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಯುತ ಜಿ. ಜಿ. ಶೆಟ್ಟಿ, ಶಾಲಾ ಸಂಪನ್ಮೂಲ ವ್ಯಕ್ತಿಯಾಗಿರುವ ಶ್ರೀಮತಿ ಪ್ರೇಮಾವತಿ ಭಟ್ಟ ಭರತನಹಳ್ಳಿ ವಾರ್ಡ ಒಕ್ಕೂಟದ ಅಧ್ಯಕ್ಷರಾದ ಭವಾನಿ ನಾಯ್ಕ. ಸಂಜೀವಿನಿ ತಾಲ್ಲೂಕ ಕಾರ್ಯಕ್ರಮ ವ್ಯವಸ್ಥಾಪಕರಾದ ಮಂಜಣ್ಣ ಬಿ. ಸಮೂಹ ಮೇಲ್ವಿಚಾರಕರಾದ ಶ್ರೀ ರಾಮಣ್ಣ ಪನ್ನೇರ ಆಡಳಿತ ಸಹಾಯಕರಾದ ಶ್ರೀ ಗಿರೀಶ ಹೆಗಡೆ ಹಾಗೂ ಎಮ್.ಸಿ.ಆರ್.ಪಿಯವರಾದ ಶ್ರೀಮತಿ ಮೀನಾ ಮತ್ತು ಕುಮಾರಿ. ಸ್ವಾತಿ ರವರು ಉಪಸ್ಥಿತರಿದ್ದರು ಹಾಗೂ ಕಾರ್ಯಕ್ರಮದಲ್ಲಿ ಯುವಕ ಯುವತಿಯರು ಸ್ವ ಸಹಾಯ ಸಂಘಗಳ ಸದಸ್ಯರು ಹಾಜರಿದ್ದರು.

## ಜೋಯಿಡಾ:

ದಿನಾಂಕ 19-01-2015 ರಂದು ಸಮಯ 10.30 ಕ್ಕೆ ಜೋಯಿಡಾ ಸಂಜೀವಿನಿ ತಾಲ್ಲೂಕು ನಿರ್ವಹಣಾ ಅಭಿಯಾನ ಘಟಕ ಸಿಬ್ಬಂದಿಗಳು, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು, ಶ್ರೀರಾಮ್ ಪ್ರೌಢಶಾಲೆಯ ಮಕ್ಕಳು ಕೂಡಿಕೊಂಡು ಕನ್ನಡ ಭವನದ ಮುಖ್ಯದಾರಿಯಿಂದ ಹೊರಟ ಯುವ ಸ್ವಾವಲಂಬನೆ ಮತ್ತು ಮಹಿಳಾ ಸಶಕ್ತೀಕರಣ ಜಾಗೃತಿ ಜಾಥಾ ಕಾರ್ಯಕ್ರಮ ಸ್ವಾಮಿ ವಿವೇಕಾನಂದರ ಘೋಷಣೆ

ಯೊಂದಿಗೆ ಮುಖ್ಯಬೀದಿಗಳಲ್ಲಿ ಬ್ಯಾನರ್ ಹಿಡಿದುಕೊಂಡು ಪ್ರಭಾತಪೇರಿ ಮಾಡಲಾಯಿತು. ಈ ಜಾಥ ಕಾರ್ಯಕ್ರಮದಲ್ಲಿ 'ಸಂಜೀವಿನಿ' ಮತ್ತು ರಾಜೀವ ಗಾಂಧೀ ಚೈತನ್ಯ ಯೋಜನೆಯ ಮಾಹಿತಿ ಹೊಂದಿದ ಕರಪತ್ರಗಳನ್ನು ಯುವಕ-ಯುವತಿಯರಿಗೆ ಮಹಿಳೆಯರಿಗೆ ಹಂಚಲಾಯಿತು. ಮರಳಿ ಜಾಥ ಕನ್ನಡ ಭವನದಲ್ಲಿ ಸೇರಲಾಯಿತು.

ಸ್ವಾಮಿ ವೀವೇಕಾನಂದ ಜಯಂತಿಯ ಯುವ ಸಪ್ತಾಹದ ಅಂಗವಾಗಿ ಸ್ವಾವಲಂಭನೆ ಜೀವನ ಮತ್ತು ಮಹಿಳಾ ಸಶಕ್ತೀಕರಣ ಜಾಗೃತಿ ಕಾರ್ಯಕ್ರಮವನ್ನು ಕನ್ನಡ ಭವನ ಜೋಯಿಡಾದಲ್ಲಿ ಹಮ್ಮಿ ಕೊಳ್ಳಲಾಯಿತು.

ಮಹಾ ತೇಜಸ್ವಿ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಶ್ರೀಮತಿ ಕಿಶೋರಿ ಪರವಾರ ತಾಲ್ಲೂಕು ಪಂಚಾಯತಿಯ ಅಧ್ಯಕ್ಷೆ ಪೂಜೆ ಸಲ್ಲಿಸಿ ವೇದಿಕೆಯ ಮೇಲೆ ಉಪಸ್ಥಿತರಿದ್ದ ಹಿರಿಯರಿಂದ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಜಿ. ವಿ. ಭಟ್ರವರು ತಾಲ್ಲೂಕು ಪಂಚಾಯತ್ ವ್ಯವಸ್ಥಾಪಕರು ಮಾಹಾಗಣಪತಿಯ ಪ್ರಾರ್ಥನೆ ಯೊಂದಿಗೆ ವೇದಿಕೆಗೆ ಸ್ವಾಗತಿಸಿದರು. ಸಂಜೀವಿನಿ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಡಿ. ಮರಿಸ್ವಾಮಿರವರು ಸ್ವಾಮಿ ವಿವೇಕಾನಂದರ ಜನನ ಅವರ ಜೀವನದ ಆದರ್ಶಗಳು ಯುವಜನತೆಗೆ ಹಾಗೂ ಮಹಿಳೆಯರಿಗೆ ಇಂದಿಗೂ ಅನ್ವಯಿಸುವ ಹಲವಾರು ವೈಚಾರಿಕ ನುಡಿಗಳ ಕುರಿತು ಮಾಹಿತಿ ನೀಡುವುದರ ಜೊತೆಗೆ ಸಂಜೀವಿನಿ ಯೋಜನೆಯ ಸೌಲಭ್ಯ ಪಡೆದು ಸಬಲೀಕರಣರಾಗಲು ಕರೆ ನೀಡಿದರು.

ತಾಲ್ಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ತಾನಾಜಿ ವಾಡಿಕರರವರು ಸ್ವಾಮಿ ವಿವೇಕಾನಂದರ ಜನನ ನೆನೆದು ಇಂದಿನ ಜೀವನದಲ್ಲಿ ಸ್ವಚ್ಚತೆಗೆ ತುಂಬಾ ಮಹತ್ವವನ್ನು ನೀಡಬೇಕಿದೆ. ನಮ್ಮ ಮನೆಯ ಸುತ್ತ ಮುತ್ತಲೂ, ಸಾರ್ವಜನಿಕ ಸ್ಥಳ ಸ್ವಚ್ಚತೆಯಿಂದ ಇಡಬೇಕು, ಗ್ರಾಮ ಪಂಚಾಯತ್ ವತಿಯಿಂದ ಶೌಚಾಲಯ ನಿರ್ಮಾಣಕ್ಕೆ ಹಣಕಾಸಿನ ಸೌಲಭ್ಯ ಕಲಿಸಲಿದೆ. ಮನೆಗೊಂದು ಶೌಚಾಲಯ



ನಿರ್ಮಾಣ ಮಾಡಿಕೊಳ್ಳಬೇಕು ಹಾಗೂ ಅದರ ಬಳಕೆಯ ಬಗ್ಗೆ ತುಂಬಾ ಪ್ರಾಮುಖ್ಯತೆಯನ್ನು ವಹಿಸಬೇಕು ಇದರಿಂದಾಗಿ ಸ್ವಾಭಿಮಾನದ ಜೀವನ ಜೊತೆಗೆ ಆರೋಗ್ಯ ಕಾಪಾಡಿ ಕೊಂಡತಾಗುತ್ತದೆ ಎಂದರು ಹಾಗೂ ಸಂಜೀವಿನಿ ಯೋಜನೆಯಿಂದ ಮಹಿಳೆಯರು ಹಾಗೂ ರಾಜೀವ್‌ಗಾಂಧಿ ಚೈತನ್ಯ ಯೋಜನೆಯಿಂದ ಯುವಕ ಯುವತಿಯರು ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಅಭಿವೃದ್ಧಿಹೊಂದಲು ಎಂದು ಕರೆನೀಡಿದರು.

ಜೋಯಿಡಾ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರಾದ ಶ್ರೀ ತಗಡಿಮನೆ ರವರು, ಸ್ವಾಮಿವಿವೇಕಾನಂದರ ಜೀವನದ ಆದರ್ಶಗಳನ್ನು ನೆನೆಯುತ್ತಾ, ತಾಳ್ಮೆ ಆತ್ಮವಿಶ್ವಾಸ, ಶಕ್ತಿ ಇವುಗಳ ಕುರಿತು ಉಪನ್ಯಾಸ ನೀಡಿದರು ಹಾಗೂ ಮಹಿಳೆಯರು ನೀಡುತ್ತಿದ್ದ ಗೌರವ ನೆನೆದು ಮಹಿಳೆಯರಿಗಾಗಿಯೇ ತಂದ ಸಂಜೀವಿನಿಯ ಸೌಲಭ್ಯ ಪಡೆದು ಸಬಲೀಕರಣ ಮತ್ತು ಸಶಕ್ತೀಕರಣರಾಗಲು ತಿಳಿಸಿದರು. ಸದರಿ ಕಾಲೇಜಿನ ಮತ್ತೊಬ್ಬ ಉಪನ್ಯಾಸಕರಾದ ಶ್ರೀ ಪಿ.ಜಿ. ನಾಯ್ಕ ರವರು ಸ್ವಾಮಿ ವಿವೇಕಾನಂದರ ಹಲವಾರು ಜೀವನದ ಪ್ರಸಂಗಗಳನ್ನು ನೆನೆಯುತ್ತಾ, ಧರ್ಮ ಸಂಸ್ಕೃತಿ. ಆದರ್ಶ ಗುಣಗಳ ಅಳವಡಿಕೆ ಹಾಗೂ 'ದೌರ್ಬಲ್ಯವೇ ಮರಣ' ಎನ್ನುತ್ತಾ ಯುವಜನತೆ ಮಹಿಳೆಯರು ದುರ್ಬಲ ಮನೋಭಾವನೆ ಬಿಡಬೇಕು ಎಂದು ತಿಳಿಸಿದರು.

ಸಂಜೀವಿನಿಯಿಂದ ಸ್ವಾಮಿ ವಿವೇಕಾನಂದರ ಕುರಿತ



'ರಾಷ್ಟ್ರಜಾಗೃತಿ' ಎಂಬ ಪುಸ್ತಕವನ್ನು ಯುವಕ ಯುವತಿಯರಿಗೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಉಚಿತವಾಗಿ ಹಂಚಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ತಾಲ್ಲೂಕು ಪಂಚಾಯತಿಯ ಅಧ್ಯಕ್ಷೆ ಶ್ರೀಮತಿ ಕಿಶೋರಿಪರವಾರ ರವರ ಅನುಮತಿ ಮೇರೆಗೆ ಕಾರ್ಯಕ್ರಮವನ್ನು ತಾ.ಪಂ ವ್ಯವಸ್ಥಾಪಕ ಜಿ.ವಿ ಭಟ್ ವಂದನಾರ್ಪಣೆಯೊದಿಗೆ ಮುಕ್ತಾಯಗೊಳಿಸಿದರು.

ಕಾರ್ಯಕ್ರಮದಲ್ಲಿ ಜೋಯಿಡಾ ಗ್ರಾಮ ಪಂಚಾಯಿತ್ ಕಾರ್ಯದರ್ಶಿ ಶ್ರೀ ಬೇವಿನಕೊಪ್ಪ ಮತ್ತು ಪಂಚಾಯತ್ ಸಿಬ್ಬಂದಿ, ಸಂಜೀವಿನಿ–ತಾಲ್ಲೂಕು ನಿರ್ವಹಣಾ ಅಭಿಯಾನ ಘಟಕ ಸಿಬ್ಬಂದಿ, ಸ್ವ–ಸಹಾಯ ಸಂಘದ ಮಹಿಳೆಯರು ಯುವಕ–ಯುವತಿಯರು, ಪತ್ರಕರ್ತರು, ಪೋಲಿಸ್ ಪೇದೆ ಮತ್ತು ಶಾಲಾ ಮಕ್ಕಳು ಭಾಗವಹಿಸಿದ್ದರು.

## ಉಪಸಂಹಾರ:

ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ಹಾಗೂ ನೆಹರು ಯುವ ಕೇಂದ್ರದ ಸಮನ್ವಯತೆ ಯೊಂದಿಗೆ ಸಂಜೀವಿನಿ ಕಾರ್ಯಕ್ರಮ ಉದ್ದೇಶಗಳಲ್ಲಿ ಒಂದಾದ ಮಹಿಳಾ ಸಬಲೀಕರಣ, ಯುವಕ–ಯುವತಿಯರ ಕೌಶಲ್ಯಾಭಿವೃದ್ಧಿ ಕುರಿತು ಮಹಿಳೆಯರಿಗೆ ಹಾಗೂ ಯುವಕ–ಯುವತಿಯರಿಗೆ ಅರಿವು ಮೂಡಿಸುವಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಜಗತ್ತಿಗೆ ಸ್ಫೂರ್ತಿ ನೀಡಿದ ಸ್ವಾಮಿ ವಿವೇಕಾನಂದರ ಆದರ್ಶಗಳು, ವಿಚಾರಧಾರೆಗಳು, ಏಳಿ ಎದ್ದೇಳಿ, ಜಾಗೃತರಾಗಿರಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎನ್ನುವ ಸಂದೇಶ ಹಾಗೂ ಜೀವನ ತತ್ವಗಳು ಮಹಿಳೆಯರಿಗೆ, ಯುವಕ–ಯುವತಿಯರಿಗೆ ಸ್ಫೂರ್ತಿ. ಈ ಸಂದೇಶ ಹಾಗೂ ವಿಚಾರಧಾರೆಗಳನ್ನು ಮಹಿಳೆಯರು ಅಳವಡಿಸಿಕೊಂಡಲ್ಲಿ ಸ್ವ ಸಹಾಯ ಸಂಘಗಳ ಸಬಲೀಕರಣ, ಸಾಮಾಜಿಕ, ಆರ್ಥಿಕ ಸಧೃಡತೆಗೆ ಮುನ್ನುಡಿಯಾಗುತ್ತದೆ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು

* ಸತೀಶ್ ಬಿ. ಸುಣಗಾರ್

ಕರ್ನಾಟಕದ ಗಡಿಭಾಗದಲ್ಲಿರುವ ಬೆಳಗಾವಿ ಜಿಲ್ಲೆ. ವಿಶ್ವದಲ್ಲಿಯೇ ಕರದಂಟಿಗೆ ಹೆಸರುವಾಸಿಯಾದ ತಾಲ್ಲೂಕು ಗೋಕಾಕ. ತವಗ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುವದು 5 ಗ್ರಾಮಗಳಲ್ಲಿ ಕನಸಗೇರಿ ಒಂದು. ಈ ಗ್ರಾಮ ಜಿಲ್ಲಾ ಕೇಂದ್ರ ಬೆಳಗಾವಿಯಿಂದ 60 ಕಿ.ಮಿ ದೂರದಲ್ಲಿದ್ದು. ತಾಲ್ಲೂಕು ಕೇಂದ್ರ ಗೋಕಾಕದಿಂದ 15 ಕಿ.ಮಿ. ದೂರದಲ್ಲಿರುವ ಒಂದು ಪುಟ್ಟ ಗ್ರಾಮ ಕನಸಗೇರಿ.

ಬೆಳಗಾವಿ ಜಿಲ್ಲೆ ಗೋಕಾಕ್ ತವಗ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಶಾಲೆಯ ಆಟದ ಮೈದಾನ ನಿರ್ಮಿಸಿದ ಸಾಧನೆಯ ಚಿತ್ರಣ.

ಸದರಿ ಗ್ರಾಮವು ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದ್ದು ಗ್ರಾಮದ ಸುತ್ತಲೂ ಗುಡ್ಡಗಾಡು ಪ್ರದೇಶ ಹೊಂದಿದೆ. ಇಲ್ಲಿನ ಜನರ ಮುಖ್ಯ ಕಸಬು ಕೃಷಿಯಾಗಿರುತ್ತದೆ. ಈ ಗ್ರಾಮದಲ್ಲಿ ಕೃಷಿ ಆಧಾರಿತ ಕೂಲಿಕಾರರ ಸಂಖ್ಯೆ ಹೆಚ್ಚಾಗಿರುತ್ತದೆ. ಗ್ರಾಮವು ಮೂಲಭೂತ ಸೌಕರ್ಯಗಳಾದ ಶಾಲೆ, ಅಂಗನವಾಡಿ ಸೌಕರ್ಯಗಳು ಇದ್ದು. ಇವುಗಳಿಗೆ ಪೂರಕವಾದ



ಕೆಲಸಕ್ಕೆ ಬಂದ ಕಾರ್ಮಿಕರು ಮತ್ತು ಕಾರ್ಯದರ್ಶಿಯವರು ಕಾಮಗಾರಿಯನ್ನು ಪೂಜೆ ಮಾಡುವರೊಂದಿಗೆ ಪ್ರಾರಂಭಿಸುತ್ತಿರುವದು.

ಸೌಕರ್ಯಗಳಾದ ಶಾಲಾ ಆಟದ ಮೈದಾನ, ಕಂಪೌಂಡ್, ನೀರಿನ ಸೌಲಭ್ಯ ಹೀಗೆ ಇನ್ನಿತರ ಸೌಕರ್ಯಗಳಿಂದ ವಂಚಿತವಾಗಿದೆ.

* ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತವಗ ಗ್ರಾ.ಪಂ. ಗೋಕಾಕ್ ತಾಲ್ಲೂಕ್, ಬೆಳಗಾವಿ ಜಿಲ್ಲೆ

ತವಗ ಗ್ರಾಮ ಪಂಚಾಯತಿಯು ಸ್ವಂತ ಕಟ್ಟಡ ಹೊಂದಿದ್ದು. ವಿದ್ಯುತ್ ಮತ್ತು ಗಣಕಯಂತ್ರ ಹಾಗೂ ಅಂತರಜಾಲದ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 1500 ಕುಟುಂಬಗಳು ನೊಂದಾಯಿಸಿಕೊಂಡಿರುತ್ತಾರೆ.

ಕನಸಗೇರಿ ಗ್ರಾಮದಲ್ಲಿ 512 ಕುಟುಂಬಗಳು ಈ ಯೋಜನೆಯಡಿಯಲ್ಲಿ ನೊಂದಾಯಿಸಿಕೊಂಡಿರುತ್ತವೆ. ಪ್ರಸ್ತುತ ಗ್ರಾಮದಲ್ಲಿ ಒಂದು ಕಿರಿಯ ಪ್ರಾಥಮಿಕ ಪಾಠ ಶಾಲೆಯಿದ್ದು. ಈ ಪಾಠ ಶಾಲೆಗೆ ಸುಮಾರು 3 ಎಕರೆ ವಿಶಾಲವಾದ ಆಟದ ಮೈದಾನವಿರುತ್ತದೆ.

ಶಾಲಾ ಆವರಣವು ಕಲ್ಲು, ಮುಳ್ಳು, ತಗ್ಗು ದಿನ್ನೆಗಳಿಂದ ಕೂಡಿದ್ದು. ಮಕ್ಕಳಿಗೆ ಆಟವಾಡಲು ಅನುಕೂಲಕರವಾಗಿರುವದಿಲ್ಲ. ಅಲ್ಲದೆ ಶಾಲೆಗೆ ಕಂಪೌಂಡ ಇಲ್ಲದೆ ಮಕ್ಕಳಿಗೆ ಮತ್ತು ಶಾಲೆಗೆ ರಕ್ಷಣೆ ಇಲ್ಲದಂತಾಗಿತ್ತು.

ಈ ಸಮಸ್ಯೆಗಳನ್ನು ನಿವಾರಿಸಲು ಗ್ರಾಮಸ್ಥರು ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಸಂಬಂದಿಸಿದ



ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರು. ಯಾವುದೆ ಪ್ರಯೋಜನೆವಾಗಿರಲಿಲ್ಲ. ಇಂತಹ



ಸಂದರ್ಭದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂಬ ಮಹತ್ವಾಕಾಂಕ್ಷೆ ಯೋಜನೆಯಡಿಯಲ್ಲಿ ಯಾವ ಕೆಲಸ ತಗೆದು ಕೊಳ್ಳಬಹುದು ಮತ್ತು ಕೂಲಿಯ ಬಗ್ಗೆ ವಿವರವಾಗಿ ಜನರಿಗೆ ಉನ್ನತ ಅಧಿಕಾರಿಗಳು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ಸಂಯೋಜಕರು, ಕಾರ್ಯದರ್ಶಿಗಳು ಕನಸಗೇರಿ ಗ್ರಾಮ ಮತ್ತು ಎಲ್ಲ ಗ್ರಾಮಸ್ಥರು ಗ್ರಾಮಸಭೆಯ ಮೂಲಕ ಈ ಮಾಹಿತಿಯನ್ನು ನೀಡಿದರು. ಅದರಂತೆ ಗ್ರಾಮ ಸಭೆಯಲ್ಲಿ ಕಾಮಗಾರಿಯನ್ನು ಸೂಚಿಸಿದರು. ಈ ಕಾಮಗಾರಿಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಯಾದ ಕಾಮಗಾರಿಗೆ ನಿಯಮಾನುಸಾರ 4.00 ಲಕ್ಷ ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದುಕೊಂಡರು.

ಆ ಸಮಯದಲ್ಲಿ 62 ಕುಟುಂಬಗಳು ಉದ್ಯೋಗ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸಿದ ಕುಟುಂಬಗಳಿಗೆ ಈ ಕಾಮಗಾರಿಯಲ್ಲಿ ಉದ್ಯೋಗ ನೀಡಿ ಕಾಮಗಾರಿಯನ್ನು ಪ್ರಾರಂಭಿಸಿದರು. 62 ಕಟುಂಬಗಳ ಸದಸ್ಯರುಗಳು ನಿರಂತರವಾಗಿ ಕೂಲಿ ಕೆಲಸವನ್ನು ನಿರ್ವಹಿಸಿದರು. ಅದರಲ್ಲಿ 27 ಕುಟುಂಬಗಳು 100 ದಿನಗಳ ಪೂರ್ಣ ಕೆಲಸವನ್ನು ನಿರ್ವಹಿಸಿದರು.



**ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಮತ್ತು ಕಾಮಗಾರಿ ಪರಿಶೀಲನೆಗೆ ಬಂದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಧಿಕಾರಿಗಳ ತಂಡ**

ಈ ಕಾಮಗಾರಿ ನಿರ್ವಹಿಸಿದ್ದರಿಂದ ಮಕ್ಕಳಿಗೆ ತುಂಬಾ ಸಂತೋಷವಾಗಿದ್ದು ಮಾತ್ರ ಸತ್ಯ. ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬರುತ್ತಿದ್ದಾರೆ ಹಾಗೂ ಆಸಕ್ತಿಯಿಂದ ಆಟೋಟಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

1. **ಮಕ್ಕಳ ಅನಿಸಿಕೆ:** ಮೊದಲು ನಮಗ ಆಟ ಆಡೋಕೆ ಜಾಗ ಇರಲಿಲ್ರಿ. ಈಗ ಬಾಳ ಚಲೋ ಅಗೇತ್ರೀ.

2. **ಮುಖ್ಯೋಪಾದ್ಯಯರು:** ಆಟದ ಮೈದಾನ ಮಾಡಿರುವದರಿಂದ ಕುರುಡನಿಗೆ ಕಣ್ಣು ಬಂದಷ್ಟು ಸಂತೋಷವಾಗಿದೆ ಎಂದರು.

- ಈ ಮೈದಾನವನ್ನು ನಿರ್ಮಾಣ ಮಾಡಿದ್ದರಿಂದ ಮಕ್ಕಳಿಗೆ ಆಟ ಆಡಲು ಒಳ್ಳೆಯ ಅನುಕೂಲ ವಾಯಿತು.

- ಕೂಲಿಕಾರರಿಗೆ ಆರ್ಥಿಕವಾಗಿ ಸಹಾಯವಾಯಿತು.

ಈ ಮೇಲಿನ ಎಲ್ಲ ಅಂಶಗಳನ್ನು ನೋಡಿದಾಗ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಕನಸಗೇರಿ ಆಟದ ಮೈದಾನ ತಯಾರಾಯಿತು. ಈ ಮೈದಾನದಲ್ಲಿ ಇಂದು ಆಟ ಆಡಲು ಪ್ರಾರಂಭಿಸಿದ ಮಕ್ಕಳು ಮುಂದೊಂದು ದಿನ ಈ ದೇಶದ ಒಬ್ಬ ಒಳ್ಳೆಯ ಕ್ರಿಡಾಪಟುಗಳಾಗಿ ದೇಶಕ್ಕೆ ಕೀರ್ತಿ ತರುತ್ತಾರೆ ಎಂದು ಹೇಳಬಹುದು.




# ಪಂಚಾಯತ್ ರಾಜ್ ಮತ್ತು ಸಮಾಜ ವಿಕಾಸ



ಪ್ರೊ: ಎ.ಎಚ್. ಮಾಸಾಪತಿ

ಆದುನಿಕ ಭಾರತದ ನಿರ್ಮಾಪಕರು, ಅಭಿವೃದ್ಧಿಪರ ಭಾರತದ ನಿರ್ಮಾಣಕ್ಕಾಗಿ, ವಿನೂತನ ನ್ಯಾಯ-ಸ್ಥಾನವನ್ನು ಸೃಷ್ಟಿಸಿದ್ದಾರೆ. ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಪ್ರೇರಿತವಾದ ವ್ಯವಸ್ಥೆಯನ್ನು ಸುದೃಢಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತವೆ.

ನೆಹರೂ ಮಂತ್ರಿಮಂಡಲದಲ್ಲಿ, ಪಂಚಾಯಿತ್ ರಾಜ್ ಪ್ರಥಮ ಸಚಿವರಾಗಿದ್ದ, ಶ್ರೀ ಎಸ್.ಕೆ.ಡೇ ಸಾಹೇಬರು ಮಹತ್ವದ ಅತಿಸೂಕ್ಷ್ಮ ರಹಸ್ಯಾತ್ಮಕವಾದ ಅನುಭವ/ಅನುಭೂತಿಯನ್ನು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ ಬಹಿರಂಗಗೊಳಿಸಿದ್ದಾರೆ. ಮಹಾತ್ಮಾ ಗಾಂಧೀಜಿ ಹಾಗೂ ಜೆ.ಎಮ್. ನೆಹರೂ ಅವರು, ಪಂಚಾಯತ್ ರಾಜ್ ಅರ್ಥ, ವೈಶಾಲ್ಯ ಮತ್ತು ಧ್ಯೇಯೋದ್ದೇಶಗಳನ್ನು ಅರ್ಥ ಮಾಡಿಕೊಳ್ಳುವಂತಹ ವಿಶಿಷ್ಟವಾದ ಸಾಮರ್ಥ್ಯ ಹೊಂದಿದ್ದರು. 1964ರ ಏಪ್ರಿಲ್ ತಿಂಗಳಿನ ಅಂತಿಮ ವಾರದ ಒಂದು ಮಧ್ಯರಾತ್ರಿಯಲ್ಲಿ, ಪ್ರಧಾನ ಮಂತ್ರಿಯ ನಿವಾಸದಿಂದ ಪಂಚಾಯತ್ ರಾಜ್ ಮಂತ್ರಿಗೆ ದೂರವಾಣಿಯ ಒಂದು ಕರೆ ಬಂದಿತು. ಶ್ರೀ ಎಸ್.ಕೆ.ಡೇ ಅವರು ಪ್ರಧಾನ ಮಂತ್ರಿಯ ನಿವಾಸ ತಲುಪಿದಾಗ ನೆಹರೂ ಅಸಾಧಾರಣ ಖಿನ್ನತೆಯಿಂದ ಆವೃತರಾಗಿದ್ದರು. ಅಂತಹ ಚಿಂತಾಜನಕ ಸ್ಥಿತಿಯಲ್ಲಿಯೂ ಸಹ ಅವರು ಪಂಚಾಯತ್ ರಾಜ್ಯ ಸಂಸ್ಥೆಗಳ ಸ್ಥಿತಿ/ಗತಿ ಹಾಗೂ ಅವುಗಳನ್ನು ಸಂಪೂರ್ಣವಾಗಿ ನಾಶ ಮಾಡಲು ಅಪೇಕ್ಷಿಸುವಂತಹ ವಿರೋಧಿಗಳನ್ನು ಕುರಿತು, ವಿಚಾರಣೆ ಮಾಡಿದರು.

ಶ್ರೀ ಎಸ್.ಕೆ.ಡೇ ಅವರು ಪ್ರಧಾನಮಂತ್ರಿಗೆ ನೀಡಿದ ಪ್ರತಿಕ್ರಿಯೆಯು ಗಮನಾರ್ಹವಾಗಿತ್ತು. ಹಿಂದಿ ಭಾಷೆಯ ರಾಜ್ಯಗಳು ಜನತೆಯ ಮೇಲೆ ಅಧಿಕಾರ ಇರಬೇಕು' ಎಂದು ಬಯಸುತ್ತವೆ. ಆದರೆ, ಇಂತಹ ಆಕರ್ಷಣೆಗೆ ವಿರುದ್ಧವಾಗಿ ಮಹಾರಾಷ್ಟ್ರ, ಗುಜರಾತ್ ಇತ್ಯಾದಿ ರಾಜ್ಯಗಳಲ್ಲಿ, 'ಜನತೆಗೆ ಅಧಿಕಾರ' (Power to the People) ಎಂಬ ವಿಚಾರಕ್ಕೆ ಬೆಂಬಲ ನೀಡಲಾಗಿದೆ. 1969ರ ವೇಳೆಗೆ ಪಂಚಾಯತ್ ರಾಜ್ ಸಂಸ್ಥೆಗಳನ್ನು ಯಾರಿಂದಲೂ ನಾಶಗೊಳಿಸಲು ಸಾಧ್ಯವಾಗಲಾರದೆಂದು ಪಂಚಾಯತ್ ರಾಜ್ ಮಂತ್ರಿ ತಿಳಿಸಿದಾಗ 'ಓ! ಗೆಳೆಯಾ ಸಮಯವಿಲ್ಲ!' ಎಂದು ಪುನರುಚ್ಚರಿಸಿದ ನೆಹರೂ ಅವರು ಒಂದು ತಿಂಗಳ ನಂತರ (27ನೇ ಮೇ 1964ರಂದು) ನಿಧನ ಹೊಂದಿದರು. ಅದು ಅವರೊಂದಿಗಿನ ಅಂತಿಮ ಬೇಟಿಯಾಗಿತ್ತು. ಪ್ರಧಾನ ಮಂತ್ರಿಯ ಮರಣದ ನಂತರ, ಶ್ರೀ ಎಸ್.ಕೆ.ಡೇ. ಅವರ ಕಾರ್ಯಕ್ರಮಗಳಿಗೆ ಸೂಕ್ತವಾದ ಪ್ರೋತ್ಸಾಹ ಸಿಗಲಿಲ್ಲ. ಅಪೇಕ್ಷಿತವಾದ ಬೆಂಬಲದ ಕೊರತೆಯಿಂದ ನಂತರದ ದಿನಗಳಲ್ಲಿ ವಿಶಿಷ್ಟವಾಗಿ, ಲಾಲ್ ಬಹಾದ್ದೂರ್ ಶಾಸ್ತ್ರೀ ಆಳ್ವಿಕೆಯಲ್ಲಿ ಶ್ರೀ ಎಸ್.ಕೆ.ಡೇ ಅವರು ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದರು. ಸ್ವಲ್ಪ ತಾಳ್ಮೆಯಿಂದ ಇರಲು, ಅವರಿಗೆ ಸೂಚಿಸಲಾಗಿತ್ತು. ಆದರೆ, ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ತಾಸ್ಕೆಂಟ್‌ದಲ್ಲಿ ಅನುಮಾನಾಸ್ಪದವಾಗಿ ಮರಣ ಹೊಂದಿದ ನಂತರ, ಪಂಚಾಯತ್ ರಾಜ್ ಸಚಿವರ ಕನಸು ಭಗ್ನವಾಯಿತು. ಆ ನಂತರದ ವರ್ಷಗಳಲ್ಲಿ, ಪಂಚಾಯಿತಿ ರಾಜ್ಯ ವ್ಯವಸ್ಥೆಯ ಬೆಳವಣಿಗೆಗಾಗಿ, ಅವಿಶ್ರಾಂತವಾದ ಹೋರಾಟ ನಡೆಯುತ್ತ ಸಾಗಿದೆ.

* ನಿರ್ದೇಶಕರು, ವಿಕಾಸ ಪ್ರಕಾಶನ, ನಂ 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ.ರೋಡ್, ಸುಲ್ತಾನ್ ಪಾಳ್ಯ, ಬೆಂಗಳೂರು-560 032 ಮೊಬೈಲ್ ನಂ. 93435 35229

## ನೆಹರೂ ನಿಯಮ (Nehru Formula)

ಸರ್ವತೋಮುಖವಾದ ಅಭಿವೃದ್ಧಿಗಾಗಿ ನಡೆದು ಬಂದಿರುವ ಅತಿ ದುರ್ಗಮವಾದ ದಾರಿಯ ಸಿಂಹಾವಲೋಕನವಾಗಬೇಕು, ಕೆಲವು ವ್ಯಕ್ತಿಗಳ ಕೈಯಲ್ಲಿ ಮಾತ್ರ ಅಧಿಕಾರದ ಕೇಂದ್ರೀಕರಣವಾಗಬಾರದು. ಅಧಿಕಾರದ ದುರ್ಬಳಕೆ ಅಥವಾ ನಿರ್ಬಳಕೆಯನ್ನು ನಿಯಂತ್ರಿಸುವ ಸಾಮರ್ಥ್ಯ ಸಂಪಾದನೆಗಾಗಿ ಎಲ್ಲರಿಗೂ ಅವಕಾಶ ಕಲ್ಪಿಸಬೇಕು. ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಒಂದು ಪ್ರಕ್ರಿಯ ಆಗಿದೆ. ಯಾವುದೇ ಒಂದು ರಾಜ್ಯವನ್ನು ಅತ್ಯಂತ ಆತ್ಮೀಯತೆ ಮತ್ತು ಸಾಮೀಪ್ಯತೆಯಿಂದ ಪ್ರತಿನಿಧಿಸುವಂತಹ ಧುರೀಣನು ತಳಮಟ್ಟದಿಂದ ಮುನ್ನಡೆಸುವಂತಹ ಮಾರ್ಗ ದರ್ಶಕನಾಗಬೇಕು. ನೆಹರೂ ನಂತರ, ಪಂಚಾಯತ್ ರಾಜ್ ವ್ಯವಸ್ಥೆಯು; ನಾಯಕತ್ವ ನಿರ್ವಹಿಸುವುದೆಂದು, 1958ರ ಬೆಂಗಳೂರಿನ ಸಮಾವೇಶದಲ್ಲಿ, ನೆಹರೂ ಸ್ಪಷ್ಟವಾಗಿ ವಿವರಿಸಿದ್ದಾರೆ.

ಆಧುನಿಕ ಭಾರತದಲ್ಲಿ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು 1952ರ ಅಕ್ಟೋಬರ್ 2 ರಂದು, ಪಂಚಾಯತ್ ರಾಜ್ ವ್ಯವಸ್ಥೆಯು 1958ರ ಅಕ್ಟೋಬರ್ ಹಾಗೂ ಸಹಕಾರಿ ಸಂಸ್ಥೆಗಳು 1960ರಲ್ಲಿ ಆರಂಭವಾಗಿವೆ. ಪ್ರತಿಯೊಂದು ಪುನರ್–ಸಂಘಟಿತ ಗ್ರಾಮವು ಮೂರು ಪ್ರಾಥಮಿಕ ಸಂಸ್ಥೆಗಳನ್ನು ಹೊಂದಿರುತ್ತವೆ

(1) ಗ್ರಾಮೀಣ ಶಾಲೆ

(2) ಗ್ರಾಮ ಪಂಚಾಯಿತಿ

(3) ಗ್ರಾಮೀಣ ಸಹಕಾರಿ ಸಂಸ್ಥೆ

ಪ್ರಥಮ ಪಂಚವಾರ್ಷಿಕ ಯೋಜನೆಯ ವ್ಯಾಪ್ತಿಯಲ್ಲಿ, ಸುಮಾರು ಎರಡು ಲಕ್ಷ ಗ್ರಾಮಗಳು ಮತ್ತು ಅಷ್ಟೇ ಸಂಖ್ಯೆಯ ಸಹಕಾರಿ ಸಂಸ್ಥೆಗಳನ್ನು ಆವರಿಸಿರುವಂತಹ ಒಂದು ರಾಷ್ಟ್ರೀಯ ಕಾರ್ಯಕ್ರಮವು ಭಾರತದಂತಹ ಜನಸಂಖ್ಯಾ ಬಾಹುಳ್ಯದ ರಾಷ್ಟ್ರದಲ್ಲಿ ಕ್ರಿಯಾವಿಹೀನವಾಗಿರಲು ಸಾಧ್ಯವಿಲ್ಲ. ಇಂತಹ ಕಾರ್ಯಕ್ರಮವು ಮುಂದೆ ಸಾಗಬೇಕು ಅಥವಾ ಹಿಂದೆ ಸರಿಯಬೇಕು. 1954ರಲ್ಲಿ ನಿಕಿಟಾ ಕ್ರುಶ್ಚೇವ್ ಮತ್ತು ಬುಲ್ಗಾನಿನ್ (ಆಗಿನ ರಷ್ಯಾ ನಾಯಕರು) ಭಾರತಕ್ಕೆ ಆಗಮಿಸಿದಾಗ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಪಂಚಾಯತ್ ರಾಜ್ ಹಾಗೂ ಸಹಕಾರಿ ಸಂಸ್ಥೆಗಳನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಭಾರತದಾದ್ಯಂತ ಇಂತಹ ಕಾರ್ಯಕ್ರಮಗಳಿಗೆ ತಳಹದಿಯನ್ನು ನಿರ್ಮಿಸಲು ಸುಮಾರು ಹದಿನೈದು ವರ್ಷಗಳು ಬೇಕೆಂದು, ಶ್ರೀ ಎಸ್.ಕೆ.ಡೇ ತಿಳಿಸಿದ್ದರು. ಆದರೆ, ಹತ್ತು ವರ್ಷಗಳಲ್ಲಿ ಪೂರ್ಣಗೊಳಿಸಲು ರಷ್ಯಾ ನಾಯಕರು ಸಲಹೆ ನೀಡಿದ್ದರು. ಈ ಬೇಟಿಯ ನಂತರ, ಅವರನ್ನು ಎಂದಿಗೂ ಕಾಣುವಂತಹ ಪ್ರಸಂಗ ಬರಲಿಲ್ಲ. ಸಮಯವಾಗಲಿ ಅಥವಾ ನೀರಿನ ತೆರೆಗಳಾಗಲಿ, ಯಾರಿಗಾಗಿಯೂ ಕಾಯುತ್ತ ಕುಳಿತುಕೊಳ್ಳುವುದಿಲ್ಲ. ಸತ್ಯವು ಸತ್ಯವನ್ನು ಸೃಷ್ಟಿಸುವಂತೆ, ಮಿಥ್ಯವು ಮಿಥ್ಯವನ್ನು ಮಾತ್ರ ನಿರ್ಮಿಸುತ್ತದೆ.

## ವಿರೋಧಿಗಳ ಪ್ರತಿಕ್ರಿಯೆ

1) ಮಧ್ಯಪ್ರದೇಶದ ಬುದ್ಧಿಜೀವಿ ಮಾಜಿ ಮುಖ್ಯಮಂತ್ರಿ ಡಾ: ಡಿ.ಪಿ. ಮಿಶ್ರಾ ಅವರು ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಬಲವಾದ ವಿರೋಧಿ ಆಗಿದ್ದರು ಜಿಲ್ಲಾ/ಸ್ಥಾನಿಕ ಮಂಡಳಿ ಮತ್ತು ಪಂಚಾಯತಿ ಗಳನ್ನು ರದ್ದು ಮಾಡಿದ್ದರು. ಸಮುದಾಯ ಅಭಿವೃದ್ಧಿ ಹಾಗೂ ಸಹಕಾರಿ ಸಂಘಗಳ ರಚನಾತ್ಮಕ ಕಾರ್ಯಕ್ರಮಗಳನ್ನು ಅವರು ನಿರ್ಲಕ್ಷಿಸಿದ್ದರು. ನೆಹರೂ ನಿಧನದ ನಂತರ, ನೆಹರೂ ವಿರೋಧಿ ರಾಜ್ಯಗಳು ಹಾಗೂ ರಾಜಕೀಯ ಪಕ್ಷಗಳು, ಪಂಚಾಯತ್ ರಾಜ್ ವ್ಯಸ್ಥೆಯನ್ನು ಕುರಿತು ಸಂಸತ್ತಿನಲ್ಲಿ ಅಸಭ್ಯ ಮತ್ತು ಅಪಹಾಸ್ಯದ ಮಾತುಗಳನ್ನು ಆಡಲಾರಂಭಿಸಿದ್ದರು. ಸ್ವತಂತ್ರ ಭಾರತದಲ್ಲಿ, ಇಂತಹ ಅತಿ ಹಳೆಯ ಕಾಲಬಾಹಿರ ಹಾಗೂ ಕಾಲ್ಪನಿಕ ಅಭಿರುಚಿಯ ಸಂಸ್ಥೆಗಳು ಅಪ್ರಸ್ತುತವಾಗಿವೆಯೆಂದು ವಿರೋಧಿಸುತ್ತಿದ್ದರು.

2) ತಮಿಳುನಾಡಿನ ಶ್ರೀಸಾಮಾನ್ಯರ ಜನಪ್ರಿಯ ಮಾಜಿ ಮುಖ್ಯಮಂತ್ರಿಯೆಂದು ಖ್ಯಾತರಾಗಿದ್ದ ಕಾಮರಾಜ್ ಅವರಿಗೆ ಪಿಆರ್‌ಐಗಳಲ್ಲಿ ವಿಶ್ವಾಸ ವಿಲ್ಲವೆಂದು ಕಂಡುಬಂದಿದೆ. ಅವರು ಸರ್ಕಾರಿ ಆಜ್ಞೆಯ (ಜಿ.ಒ.) ಮೂಲಕ "ಗ್ರಾಮಸಭೆ" ಆರಂಭಿಸಲು ಅಪೇಕ್ಷಿಸಲಿಲ್ಲ. ಜನತೆಗೆ ಅಧಿಕಾರ ನೀಡುವುದೆಂದರೆ, ಅರಾಜಕತೆಗೆ ಆಹ್ವಾನ ನೀಡಿದಂತೆಯಿಂದು, ಅವರು ತಿಳಿದಿದ್ದರು.

3) ಪ್ರಜಾಸತ್ತಾತ್ಮಕ ಮುಖವಾಡ ಧರಿಸಿದಂತಹ ಸರ್ವಾಧಿಕಾರಿಗಳು ಹಾಗೂ ಅಧಿಕಾರಶಾಹಿಗಳು ಪಂಚಾಯತ್ ರಾಜ್ ವ್ಯವಸ್ಥೆಯ ಶ್ರೇಷ್ಠತೆಯನ್ನು ದುರುದ್ದೇಶದಿಂದ ನಿರ್ಲಕ್ಷಿಸುವುದರ ಜೊತೆಗೆ, ಜನ ವಿರೋಧಿ ಧೋರಣೆಗಳಿಗೆ ಪ್ರೋತ್ಸಾಹ ನೀಡಿದ್ದಾರೆ.

4) ಶ್ರೀಮತಿ ಇಂದಿರಾ ಗಾಂಧಿ ಪ್ರಧಾನ ಮಂತ್ರಿಯಾದ ನಂತರ, ಪಂಚಾಯತ್ ರಾಜ್ ವಿಭಾಗವನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸಲಾಗಿತ್ತು

5) ಅಧಿಕಾರದ ಮಧ್ಯವರ್ತಿಗಳು ಮತ್ತು ರಾಜಕೀಯ ದಲ್ಲಾಳಿಗಳು, ಪಂಚಾಯತ್ ರಾಜ್ ಸಂಸ್ಥೆಗಳನ್ನು 'ಆಶೆ–ಆಮಿಷ'ಗಳ ಕೇಂದ್ರಗಳೆಂದು ಪರಿಗಣಿಸಿದ್ದರು

## ಪರಾಮರ್ಶೆಯ ಪರಿಷತ್ತು

1951–56ರ ಅವಧಿಯಲ್ಲಿ, ಪಂಚಾಯತ್ ರಾಜ್ ಮತ್ತು ಸಮುದಾಯ ವಿಕಾಸ ಇಲಾಖೆಯು, ಪರಾಮರ್ಶಾ ಪರಿಷತ್ತಿನ ರಚನೆಗೆ ಬೆಂಬಲ ನೀಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗೊಳ್ಳುವಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕುರಿತು, ವಿಚಾರ–ವಿಮರ್ಶೆ ನಡೆಸಲು, ಜನಪ್ರತಿನಿಧಿಗಳ ಉಪ–ಸಮಿತಿಗಳನ್ನು ರಚಿಸಲಾಗುತ್ತದೆ. ರಾಷ್ಟ್ರೀಯ ಪರಾಮರ್ಶಾ ಪರಿಷತ್ತಿನ ಸಭೆಯಲ್ಲಿ ಅನೇಕ ಸಂಸತ್ತಿನ ಸದಸ್ಯರು ಭಾಗವಹಿಸುತ್ತಾರೆ. ಸಮುದಾಯ ವಿಕಾಸ, ಪಂಚಾಯತ್ ರಾಜ್ ಹಾಗೂ ಸಹಕಾರಿ ಸಮಾಜದ ಬಗೆಗಿನ ಸಮಸ್ಯೆಗಳನ್ನು ಚರ್ಚಿಸಿ, ಸಲಹೆ–ಸೂಚನೆ ನೀಡುತ್ತಾರೆ.

ಕಳೆದ ಆರೂವರೆ ದಶಕಗಳಲ್ಲಿ, ಪರಾಮರ್ಶಾ ಪರಿಷತ್ತುಗಳ ಕಾರ್ಯವೈಖರಿಯು ಸಾಕಷ್ಟು ಬದಲಾವಣೆ ಹೊಂದಿದೆ. ಬೇಸಿಗೆಯಲ್ಲಿ ಪರ್ವತ ನಿಲ್ದಾಣ (Hill Station) ಮತ್ತು ಚಳಿಗಾಲದಲ್ಲಿ ಮನೋಹರವಾದ ಸಾಗರ ತೀರಗಳಲ್ಲಿ ಸಮಾವೇಶಗಳು ಜರುಗುತ್ತವೆ. ನಾಗರಿಕ ಸರಬರಾಜು ಸಚಿವಾಲಯದ ಆಶ್ರಯದಲ್ಲಿ, ಸಂಗೀತಮಯ ಆಸನಗಳ ಕ್ರೀಡೆಗಳನ್ನು ಜರುಗಿಸುವಂತೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ, ಸಹಕಾರಿ ಒಕ್ಕೂಟದ ಸಲಹಾ ಸಭೆಗಳನ್ನು ನಡೆಸಲಾಗುತ್ತದೆ. ಇಂತಹ ಭೋಗ–ವಿಲಾಸದ ಪ್ರವೃತ್ತಿಯಿಂದ ಪರಾಮರ್ಶಾ ಸಭೆಗಳ ಸಾಮಾಜಿಕ/ಬೌದ್ಧಿಕ ಅಂತಸ್ತು ಅಪಮೌಲ್ಯಗೊಳ್ಳುತ್ತದೆ.

## ಜನತೆಯ ಅಧಿಕಾರ

ಆದುನಿಕ ಭಾರತದ ನಿರ್ಮಾಪಕರು, ಅಭಿವೃದ್ಧಿಪರ ಭಾರತದ ನಿರ್ಮಾಣಕ್ಕಾಗಿ, ವಿನೂತನ ನ್ಯಾಯ–ಸ್ಥಾನವನ್ನು (Forum) ಸೃಷ್ಟಿಸಿದ್ದಾರೆ. ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಪ್ರೇರಿತವಾದ ವ್ಯವಸ್ಥೆಯನ್ನು ಸುದೃಢಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತವೆ. ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ, ದೇಶದಾದ್ಯಂತ ಲಕ್ಷಾಂತರ/ಕೋಟ್ಯಾಂತರ ನೂತನ ಜನಪ್ರತಿನಿಧಿಗಳು ಅಭಿವೃದ್ಧಿಪರ ಆಡಳಿತೆಯಲ್ಲಿ ಸಹಭಾಗಿತ್ವವನ್ನು ಹೊಂದಬೇಕು.

ಜನರು ಪರಸ್ಪರ ಸಹಾಯ/ಪ್ರಯೋಜನ ಪಡೆಯಲು ಅವರಿಗೆ ಅಧಿಕಾರ ಕೊಡಬೇಕು. ಭೂಮಿಗೆ ಸಂಬಂಧಿಸಿದ ಪ್ರಾಥಮಿಕ ಸಮಸ್ಯೆಗಳನ್ನು ಪರಿಹರಿಸುವ ದಿಶೆಯಲ್ಲಿ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ, ಅಕ್ರಮವಾಗಿ ಒಳನುಗ್ಗುವವರು ಹಾಗೂ ದಲ್ಲಾಳಿಗಳನ್ನು ಯಜಮಾನರೆಂದು ಪರಿಗಣಿಸಿ, ಜನ–ಸಾಮಾನ್ಯರನ್ನು ಭಿಕ್ಷುಕರ ಶ್ರೇಣಿಗೆ ತಳ್ಳಲಾಗುತ್ತದೆ. ಯಾರು ಯಾರನ್ನು ವ್ಯವಸ್ಥಿತವಾಗಿ ಶೋಷಣೆ ಮಾಡುತ್ತಾರೆಂಬ ವಿಷಯವನ್ನು ನ್ಯಾಯಸಮ್ಮತವಾದ ವಿಶ್ಲೇಷಣೆಗೆ ಗುರಿಪಡಿಸಬೇಕು. ಜನತೆಯ ಆಸೆ–ಆಕಾಂಕ್ಷೆಗಳಿಗೆ ಸ್ಪಂದಿಸುವಂತಹ ಹೊಣೆಗಾರ ಸರ್ಕಾರದ ಪರಾಮರ್ಶೆಯು ಗತಿಶೀಲವಾಗಬೇಕು.




# ಎರೆಹುಳು ಸಾಕಣಿಕೆ ಹಾಗೂ ಗೊಬ್ಬರ ತಯಾರಿಕೆ



ಶ್ರೀ ಬಸವರಾಜಯ್ಯ ಡಿ.ಎಂ.

ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಮಣ್ಣಿನ ಗುಣಮಟ್ಟ ಹಾಳಾಗುತ್ತಿರುವ ಈ ಸಂದರ್ಭದಲ್ಲಿ ಎರೆಹುಳು ಗೊಬ್ಬರ ತಯಾರಿಕೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ.

ಭಾರತ ಕೃಷಿ ಪ್ರಧಾನವಾದ ದೇಶ ಬಹು ಮುಖ್ಯವಾಗಿ ರೈತರು ಹಿಂದಿನ ಕಾಲದಲ್ಲಿ ಸಾವಯುವ ಮತ್ತು ಜೇಡಿ ಮಣ್ಣಿನ ಗೊಬ್ಬರವನ್ನು ಬಳಸಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯುತ್ತಿದ್ದರು. ಇತ್ತೀಚ್ಚಿನ ದಿವಸಗಳಲ್ಲಿ ಈ ಸುಧಾರಿತ–ಸಾಂಪ್ರಧಾಯಕ ಪದ್ಧತಿಗಳು ಮಾಯವಾಗುತ್ತಿವೆ. ಈತ್ತೀಚಿಗೆ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಇವರು ಸರ್ಮೀಕ್ಷೆಯನ್ನು ಮಾಡಿದ್ದು ಸುಮಾರು ಶೇಕಡ 85ರಷ್ಟು ರೈತರು ಕೃಷಿ ಬೆಳೆಯನ್ನು ಬೆಳೆಯಲು ತಮ್ಮ ಹೊಲ ಗದ್ದೆಗಳಿಗೆ ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸುತ್ತಿರುವುದು ಬೆಳಕಿಗೆ ಬಂದಿದೆ, ಪ್ರೌಢಾವಸ್ಥೆಯಲ್ಲಿರುವ ಈ ಒಂದು



ವಿಧಾನವನ್ನು ಅನುಸರಿಸುತ್ತಿರುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಮಣ್ಣಿನಲ್ಲಿರುವ ಪೌಷ್ಟಿಕಾಂಶದ ಪ್ರಮಾಣವು ನಶಿಸಿ ಹೋಗುತ್ತಿದೆ. ಈ ಅಧುನಿಕ ವಿಧಾನವನ್ನು ಅನುಸರಿಸಿ ಬೆಳೆದ ಕೃಷಿ ಬೆಳೆಗಳನ್ನು ಕಟಾವು ಮಾಡಿ ಆಹಾರವಾಗಿ ಉಪಯೋಗಿಸುತ್ತಿರುವುದರಿಂದ ದಿವಸಕ್ಕೆ ಪ್ರತಿ ತಲಾ ಒಂದು ಚಮಚ ನಿಚ್ಚಳ ವಿಷಯುಕ್ತ ಆಹಾರವು ನಮ್ಮ ಶರೀರಕ್ಕೆ ಸೇರ್ಪಡುತ್ತಿದೆ, ಈ ಒಂದು ವಿಷಯುಕ್ತ ಆಹಾರವನ್ನು ಸೇವಿಸುತ್ತಿರುವುದರಿಂದ ಶರೀರದಲ್ಲಿ ನಡೆಯಬೇಕಿರುವ ಚಯಪಚಯ ಕ್ರಿಯೆಗಳಿಗೆ ತೊಂದರೆಯಾಗುತ್ತಿದೆ ಮತ್ತು ಬೌಧಿಕವಾಗಿ ಸ್ವಾಧಿಷ್ಟ ಆಹಾರವು ತನ್ನ ಮೂಲ ಸ್ವರೂಪವನ್ನು ಕಳೆದು ಕೊಳ್ಳುತ್ತಿದೆ. ಹಲವಾರು ವೈದ್ಯಕೀಯ ವೈಜ್ಞಾನಿಕ ಲೇಖನಗಳು ಇದರ ಬಗ್ಗೆ ಪ್ರಕಟವಾಗಿವೆ, ಬಹು ಮುಖ್ಯವಾಗಿ ರಸಾಯನಿಕ ಗೊಬ್ಬರವನ್ನು ಬಳಸಿ ಬೆಳದ ಆಹಾರವನ್ನು ಸೇವಿಸುವುದರಿಂದ ಚರ್ಮ

* ಎಂ.ಎಸ್ಸಿ, ಕೃಷಿ (ಸಂಖ್ಯಾ ಶಾಸ್ತ್ರ) ಎಂ.ಪಿಲ್ ಸಹಾಯಕ ಪ್ರಾಧ್ಯಾಪಕರು, ಪಶು ವೈದ್ಯಕೀಯ ಮಹಾ ವಿಧ್ಯಾಲಯ, ಕೆ.ವಿ.ಎಫ್.ಎಸ್.ಯು(ಬಿ) ಹೆಬ್ಬಾಳ, ಬೆಂಗಳೂರು 560024

ಸಂಬಂಧಿ ಖಾಯಿಲೆ, ದನುರ್ವಾಯು, ಪಾರ್ಶ್ವವಾಯು ಹೃದಯ ಸಂಬಂಧಿ ಖಾಯಿಲೆ, ಕ್ಯಾನ್ಸರ್, ಮೂಳೆಗಳ ಸವೆತ, ಮಧುಮೇಹ, ಉಸಿರಾಟದ ತೊಂದರೆ, ಇನ್ನೂ ಮುಂತಾದ ಖಾಯಿಲೆಗಳಿಂದ ಮನುಷ್ಯ ಬಳಲುತ್ತಿದ್ದಾನೆ. ರೈತ ಬಾಂದವರುಗಳು ಮತ್ತು ಶ್ರೀಸಾಮಾನ್ಯರು ಈಗಲೂ ಕೂಡ ಹೆಚ್ಚೆತ್ತುಕೊಳ್ಳದೆ ವಂಶ ಪರಂಪರೆಯಾಗಿ ಬಂದಿರುವ ಸಾಂಪ್ರದಾಯಕ ನೈಸರ್ಗಿಕ ಗೊಬ್ಬರವನ್ನು ಬಳಸದೆ ಪ್ರಸ್ತುತ ರಾಸಾಯನಿಕ ಯುಕ್ತ ಗೊಬ್ಬರವನ್ನು ಬಳಸಿ ಕೃಷಿ ಬೆಳೆಗಳನ್ನು ಬೆಳೆಯುವುದನ್ನು ಈಗೆಯೇ ಮುಂದುವರಿಸುತ್ತಿದ್ದರೆ ಮುಂಬರುವ ವರ್ಷಗಳಲ್ಲಿ ಭೂಮಿಯ ಫಲವತ್ತತೆ ಮತ್ತು ಮಣ್ಣಿನ ಆರೋಗ್ಯ ನಾಶವಾಗುವುದಲ್ಲದೆ ಆಹಾರದ ಕೊರತೆಯನ್ನು ಎದುರಿಸಬೇಕಾಗುತ್ತದೆ ಮತ್ತು ವಿವಿಧ ಜೀವನ್ಮುಖ ಖಾಯಿಲೆಗಳನ್ನು ನಮ್ಮ ಮನೆ ಭಾಗಿಲಿಗೆ ಸ್ವಯಂಕೃತವಾಗಿ ಆಹ್ವಾನ ಮಾಡಿಕೊಳ್ಳುತ್ತೇವೆ.

ಈ ಒಂದು ನಿಟ್ಟಿನಲ್ಲಿ ನಮ್ಮ ಕೃಷಿ ವಿಜ್ಞಾನಿಗಳು ಹಲವಾರು ಸಾವಯುವ ಗೊಬ್ಬರ ಸಂಭದಿಸಿದ ಸಂಶೋಧನೆಗಳನ್ನು ಪ್ರಾಯೋಗಿಕವಾಗಿ ಸಂಶೋದಿಸಿ ನಮ್ಮ ರೈತ ಬಾಂದವರಿಗೆ ಎರಡು ದಶಕಗಳಿಂದ ಹುಣಬಡಿಸಿದ್ದಾರೆ. ಸಾವಯುವ ಗೊಬ್ಬರದಿಂದ ಎರೆಹುಳು ಗೊಬ್ಬರವನ್ನು ನೈಸರ್ಗಿಕವಾಗಿ ತಯಾರುಮಾಡುವುದರಿಂದ ರೈತರು ತಮ್ಮ ಆರ್ಥಿಕ ಸ್ವಾವಲಂಬನೆ ಅಭಿವೃದ್ಧಿ ಹೊಂದಿರುವುದಲ್ಲದೆ ಹೆಚ್ಚಿನ ಶೇಖಡವಾರು ಇಳುವರಿಯನ್ನು ಪಡೆದು ಮಾರುಕಟ್ಟೆಯಲ್ಲಿ ನಿಗಧಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭಗಳಿಸುವಲ್ಲಿ ನಮ್ಮ ಹಲವಾರು ರೈತಬಾಂದವರು ಸಫಲರಾಗಿದ್ದಾರೆ.

ಈ ಒಂದು ಕಿರು ಲೇಖನದಲ್ಲಿ ಎರೆ ಹುಳುವಿನ ಗೊಬ್ಬರ ತಯಾರಿಸುವ ವಿಧಾನ ಮತ್ತು ಅದರ ಉಪಯೋಗಗಳನ್ನು ನಾವುಗಳು ಪರಿಚಯಿಸುತ್ತಿದ್ದೇವೆ. ಬಹುಮುಖ್ಯವಾಗಿ ಎರೆಹುಳುಗಳ ಪಾತ್ರ ನಮ್ಮ ಹಳ್ಳಿಗಾಡಿನ ರೈತ ಬಾಂಧವರಿಗೆ ಪರಿಚಯವಿದೆ. ಈ ಹುಳುಗಳು ಸಾಮಾನ್ಯವಾಗಿ ಚರಂಡಿ, ರಸ್ತೆ ಬದಿಗಳು, ಕೆರೆಕಟ್ಟೆಗಳ ಬದಿಗಳಲ್ಲಿ, ಅತಿ ಶೀತ ಪ್ರದೇಶದಲ್ಲಿ ವಾಸಿಸುತ್ತವೆ. ಇವುಗಳನ್ನು "ರೈತ ಮಿತ್ರ" ಎಂದರೆ ತಪ್ಪಾಗಲಾರದು. ರೈತರು ಹಿಂದಿನ ಕಾಲದಲ್ಲಿ ನೈಸರ್ಗಿಕವಾಗಿ ಸಿಗುವ ಎರೆಹುಳುಗಳನ್ನು ಸಂಗ್ರಹಿಸಿ ತಮ್ಮ ಹಿತ್ತಲಿನಲ್ಲಿ ಶೇಖರಿಸುವ ಸಾವಯುವ ಗೊಬ್ಬರದ ತಿಪ್ಪೆಗಳಲ್ಲಿ ಎರೆಹುಳುಗಳನ್ನು ಬಿಟ್ಟು ಸಾಂಪ್ರದಾಯಕ ಗೊಬ್ಬರವನ್ನು ಉತ್ಪಾದನೆ ಮಾಡುತ್ತಿದ್ದರು ಮತ್ತು ಈ ಗೊಬ್ಬರವನ್ನು ಬಳಸುತ್ತಿದ್ದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುವುದಲ್ಲದೆ ಅಧಿಕ ಹಿಳುವರಿಯನ್ನು ರೈತರು ಪಡೆಯುತ್ತಿದ್ದರು. ಈ ಪದ್ದತಿಯನ್ನು ಅರಿತ ಇತ್ತೀಚಿನ ರೈತರು ಬೃಹತ್ ಪ್ರಮಾಣದಲ್ಲಿ ಎರೆಹುಳುವಿನ ಗೊಬ್ಬರವನ್ನು ತಯಾರಿಸಿ ಮಾರುಕಟ್ಟೆಗೆ ತಂದು ಮಾರಾಟ ಮಾಡುವುದಲ್ಲದೆ ತಮ್ಮ ಜೀವನ ವೃತ್ತಿಯನ್ನಾಗಿ ಮಾಡಿಕೊಂಡಿರುವುದನ್ನು ಇತ್ತೀಚಿನ



ದಿನಗಳಲ್ಲಿ ನಾವು ಕಾಣಬಹುದು. ಸಾಮಾನ್ಯವಾಗಿ ಎರೆಹುಳುವಿನ ಗೊಬ್ಬರವನ್ನು ಉತ್ಪಾದಿಸಲು ಅತ್ಯಂತ ಕಡಿಮೆ ಖರ್ಚು ತಗಲುತ್ತದೆ.

## ಎರೆಹುಳುವಿನ ಗೊಬ್ಬರವನ್ನು ತಯಾರಿಸುವ ವಿಧಾನ:

ಪ್ರಥಮವಾಗಿ ಎರೆಹುಳುವಿನ ಗೊಬ್ಬರವನ್ನು

ತಯಾರಿಸಲು ತೆಂಗಿನಗರಿ ಜೋಪಡಿ ಅತ್ಯಅವಶ್ಯಕ ಈ ಜೋಪಡಿಯನ್ನು ಕಟ್ಟಲು ಲಭ್ಯವಿರುವ ತೆಂಗಿನಗರಿಯಲ್ಲಿ ಮೊಟ್ಟೆಯನ್ನು ಎಣೆದು, ಬಿದರಿನ ಬೊಂಬುಗಳನ್ನು ಬಳಸಿ ವಿನ್ಯಾಸಕ್ಕೆ ತಕ್ಕಂತೆ 12 x 12' ವಿಸ್ತೀರ್ಣದಲ್ಲಿ ಸುಮಾರು 10' x 3' ಅಡಿ ಅಳತೆಗನುಗುಣುವಾಗಿ ಮೂರು ವಿಭಾಗಗಳಾಗಿ ವಿಂಗಡಿಸಿ ಪ್ರತಿ ವಿಭಾಗಕ್ಕೆ ಗರಿಷ್ಠ 1 ಮೀಟರ್ ಅಂತರವನ್ನು ಕೊಟ್ಟ ಪೂರ್ವ-ಪಶ್ಚಿಮಕ್ಕೆ ಭಾಗಿಲನ್ನು ಅಳವಡಿಸುವ ಮುಖಾಂತರ ಜೋಪಡಿಯನ್ನು ತಯಾರು ಮಾಡಿಕೊಳ್ಳಬೇಕು. ಸುಮಾರು 9-12 ಕ್ವಿಂಟಲ್ ಸಾವಯವ ಗೊಬ್ಬರ ಮತ್ತು ಕಸಕಡ್ಡಿಗಳನ್ನು ಸಂಗ್ರಹಣೆ ಮಾಡಿಕೊಳ್ಳಬೇಕು ಮತ್ತು ಕೃಷಿ ಬೆಳೆಗಳನ್ನು ಕಟಾವು ಮಾಡಿ ಬಿಟ್ಟ ಅನುಪಯುಕ್ತ ಒಣಗಿದ ಎಲೆಗಳನ್ನು ಮತ್ತು ಕೊಟ್ಟಿಗೆ ಗೊಬ್ಬರವನ್ನು ಸುಮಾರು 40-45 ದಿವಸಕ್ಕೆ ಅನುಗುಣವಾಗಿ ಪ್ರತಿ ವಿಂಗಡಿಸಿದ ತಾಕುಗಳಿಗೆ ಹಾಕಬೇಕು. ಪ್ರತಿ ತಾಕುವಿನಲ್ಲಿ ಸರಿ ಪ್ರಮಾಣದ ಆದಾರದ ಮೇಲೆ ಸುಮಾರು 4-6 ರ ಸಮವರ್ತಿತ ಹೂದಿಕೆಯಲ್ಲಿ ಸಂಗ್ರಹಿಸಿಟ್ಟಿರುವ ಸಾವಯವ ಗೊಬ್ಬರ ಮತ್ತು ಕಸಕಡ್ಡಿಗಳನ್ನು (ಕಬ್ಬಿನ ಸತ್ತೆಯನ್ನು) ಸರಿದೂಗಿಸಿ ಹೊದಿಕೆ ಮಾಡಬೇಕು. ಇದಾದ ನಂತರ ಈ ಹೊದಿಕೆಯ ಮೇಲೆ ನೀರನ್ನು ಸಿಂಪಡಿಸಬೇಕು, ಎರೆಹುಳುವಿನ ಮಡಿಗಳನ್ನು ತಯಾರಿಸಿದ ನಂತರ ಇವುಗಳನ್ನು ಜೂಟ್ ಕವರಿನಿಂದ ಮುಚ್ಚಬೇಕು ಇಲ್ಲದಿದ್ದಲಿ ಪಕ್ಷಿಗಳು ಮತ್ತು ಕ್ರಿಮಿಕೀಟಗಳು ನುಸುಳಿ ಅತಿಕ್ರಮಣ ಮಾಡುವ ಸಂಭವವಿರುತ್ತದೆ. ಎರೆಹುಳುಗಳನ್ನು ಸರಿಪ್ರಮಾಣದಲ್ಲಿ ತಯಾರಿಸಿದ ತಾಕುಗಳಿಗೆ ಸರಾಸರಿ 50 ಪ್ರೌಡಾವಸ್ಥೆಯಲ್ಲಿರುವ ಹುಳುಗಳನ್ನು ಪ್ರತಿ 10-15 ಕೆಜಿ ಗೊಬ್ಬರಕ್ಕೆ ಅನುಗುಣವಾಗಿ ನಿರ್ಧರಿತ ತಾಕುಗಳಿಗೆ ಬಿಡಬೇಕು. ಪ್ರತಿ ದಿವಸ ನೀರನ್ನು ತಪ್ಪದೆ ಹಾಯಿಸಬೇಕು. ನೀರನ್ನು ಹಾಯಿಸಿದ ನಂತರ ದಿವಸಕ್ಕೆ ಒಮ್ಮೆ ಕಸದ ರಾಶಿಯನ್ನು ಮೇಲಿನಿಂದ ಕೆಳಕ್ಕೆ ಬದಲಾಯಿಸಬೇಕು. ಬದಲಾಯಿಸುವಾಗ ಯಾವುದೇ



ಕಾರಣದಿಂದಲೂ ಎರೆಹುಳುವಿನ ಮಡಿಗೆ ಅಡಚಣೆ ಆಗದಂತೆ ಜಾಗರೂಕತೆ ವಹಿಸಬೇಕು. ಇದಾದ ಕೆಲವೇ ದಿವಸಗಳಲ್ಲಿ ಅರಳಿನ ಮಾದರಿಯ ಕಪ್ಪು ಮಿಶ್ರಿತ ಗೊಬ್ಬರದ ಮಾದರಿ ಗೋಚರಿಸುತ್ತದೆ. ರೈತರು ಇದನ್ನು ಪರಿಪಕ್ವವಾಗಿ ಎರೆಹುಳುವಿನಗೊಬ್ಬರ ಕಾಟಾವಿಗೆ ಬಂದಿದೆಯೆಂದು ಖಾತ್ರಿ ಮಾಡಿಕೊಳ್ಳಬಹುದು. ಕಾಟಾವು ಮಾಡುವ ಐದು ದಿವಸಗಳ ಮುಂಚೆ ನೀರನ್ನು ಹಾಯಿಸುವುದನ್ನು ನಿಲ್ಲಿಸಬೇಕು. ಈ ಎರೆಹುಳುವಿನ ಗೊಬ್ಬರವನ್ನು ತಯಾರು ಮಾಡಲು ಸುಮಾರು ಕನಿಷ್ಠ 30-45 ದಿವಸಗಳು ಬೇಕಾಗುತ್ತದೆ.

## ಎರೆಹುಳುಗಳ ಸಂತತಿ ವೃದ್ಧಿಸುವ ಬಗ್ಗೆ:

ಕೊಟ್ಟಿಗೆ ಗೊಬ್ಬರ ಹಾಗೂ ಕಸಕಡ್ಡಿ ಮಿಶ್ರಿತ ಪ್ರಮಾಣ 1:1ರಂತೆ ನಾವು ತಯಾರಿಮಾಡಿಕೊಳ್ಳಬೇಕು. ಈ ಮಿಶ್ರಣಕ್ಕೆ ತಲಾ 50 ಹುಳುಗಳಂತೆ ಪ್ರತಿ 10 ಕೆ.ಜಿ ಗೊಬ್ಬರಕ್ಕೆ ಪ್ರೌಢ ಎರೆಹುಳುಗಳನ್ನು ಬಿಡಬೇಕು. ಇದಾದ ನಂತರ ಮೇಲು ಹೊದಿಕೆಯನ್ನು ಒಣಗಿದ ಹುಲ್ಲಿನಿಂದ ಮುಚ್ಚಬೇಕು. ಮುಚ್ಚಿದ ಮಡಿಯನ್ನು ನೆರಳಿನಲ್ಲಿ ಇಟ್ಟು ಸಮಪ್ರಮಾಣದಲ್ಲಿ ನೀರನ್ನು ಕೊಡಬೇಕು. ಈ ಒಂದು ವಿಧಾನವನ್ನು ಅನುಸರಿಸುವುದರಿಂದ ಸುಮಾರು 300 ಪಟ್ಟು ಎರೆಹುಳುವಿನ ಸಂತತಿ ವೃದ್ಧಿಸುತ್ತದೆ.



## ಉಪಯೋಗಗಳು:

- ಎರೆಹುಳುಗಳು ರೈತನ ಮಿತ್ರ ಮತ್ತು ಪರಿಸರ ಸ್ನೇಹಿ ಗೊಬ್ಬರವಾಗಿ ಉಪಯೋಗಿಸಬಹುದು.
- ಈ ಗೊಬ್ಬರವನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆಗೆ ಅಡ್ಡ ಪರಿಣಾಮ ಆಗುವುದಿಲ್ಲ.
- ಎರೆಹುಳುವಿನ ಗೊಬ್ಬರವನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ, ಸಾಂದ್ರತೆ ಮತ್ತು ನೀರನ್ನು ಹಿಡಿದು ಕೊಳ್ಳುವ ಶಕ್ತಿ ಹೆಚ್ಚುತ್ತದೆ.
- ಈ ಗೊಬ್ಬರವನ್ನು ಬಳಸುವುದರಿಂದ ಫಸಲುಗಳು ಫಲವತ್ತಾಗಿ ಬೆಳೆಯುವುದಲ್ಲದೆ ಹಾಗೂ ಪೌಷ್ಟಿಕ ಆಹಾರ ಉತ್ಪಾದನೆ ಮಾಡುವ ಶಕ್ತಿಯನ್ನು ಹೊಂದಿರುತ್ತವೆ.
- ಬೆಳೆಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.
- ಎರೆಹುಳುವಿನ ಗೊಬ್ಬರವನ್ನು ಬಳಸುವುದರಿಂದ ಬೆಳೆಗಳ ಬೆಳವಣಿಗೆಯ ಪ್ರತಿ ಅಂತರದಲ್ಲಿ ಉತ್ತಮ ಆರೋಗ್ಯವನ್ನು ಕಾಪಾಡುತ್ತದೆ.

## ಮುನ್ನೆಚ್ಚರಿಕೆ ಕ್ರಮಗಳು:

- ➢ ಎರೆಹುಳುವಿನ ಗೊಬ್ಬರಕ್ಕೆ ಸೂರ್ಯನ ಕಿರಣ ಬೀಳದಂತೆ ಕಾಪಾಡಬೇಕು.
- ➢ ಹುಳುಉಪ್ಪಟ್ಟಗಳು, ಇಲಿ, ಹೆಗ್ಗಣ, ಹಾವುಗಳು ಮತ್ತು ಪಕ್ಷಿಗಳು ಎರೆಹುಳುವಿನ ಮಡಿಗಳನ್ನು ಅತಿಕ್ರಮಣ ಆಗದಂತೆ ಮುಂಜಾಗ್ರತೆ ಕ್ರಮ ವಹಿಸಬೇಕು.

ಲೇಖನ

# ಗಾಂಧೀಜಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು



ಡಾ. ಎಂ.ಡಿ. ಉಮೇಶ

ಮೊ: 9535736501

"ಸರಳ ಜೀವನ ಮತ್ತು ಉನ್ನತ ವಿಚಾರ" (Simple Life and High Thinking) ಈ ಮೂಲಕ ಮತದಾರರು ಚಿಂತನೆಯನ್ನು ಮಾಡಿ ಆಲೋಚನೆ ಮಾಡಿ ನಮ್ಮೊಳಗಿನ ಯಾವ ವ್ಯಕ್ತಿಯನ್ನು ಆಯ್ಕೆಮಾಡಬೇಕು ಎಂಬ ಅರಿವು ಮೂಡಿಸಿಕೊಳ್ಳುವ ಹೊಣೆಗಾರಿಕೆ ಪ್ರಸ್ತುತ ಸಂದರ್ಭಗಳಲ್ಲಿ ಬಹು ಮುಖ್ಯವಾಗಿದೆ.

ಪ್ರಜಾಪ್ರಭುತ್ವದ ವ್ಯವಸ್ಥೆ ಗಟ್ಟಿಗೊಳ್ಳದ ಹೊರತು ದೇಶದ ಭದ್ರ ಬುನಾದಿ ಸಾಧ್ಯವಿಲ್ಲ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿದ್ದರು. ಅವರ ಆದರ್ಶ ಪ್ರಜಾಪ್ರಭುತ್ವ ಪರಿಕಲ್ಪನೆ ಇಂದಿಗೂ ಸಾಧ್ಯವಾಗದೇ ಇರುವುದು ದುರ್ದೈವದ ಸಂಗತಿ. ದುರಂತವೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳು ಅಧ:ಪತನಗೊಳ್ಳುತ್ತಿರುವ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ನಾವಿಂದು ಗಮನಿಸಬಹುದಾಗಿದೆ. ಜನರಿಂದ ಆಯ್ಕೆಗೊಂಡಂತಹ ಜನ ಪ್ರತಿನಿಧಿಗಳು ಗ್ರಾಮಪಂಚಾಯಿತಿ ಚುನಾವಣೆಗಳು, ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಜಿಲ್ಲಾ ಪಂಚಾಯಿತಿ ಚುನಾವಣೆಗಳು, ವಿಧಾನ ಸಭಾ ಚುನಾವಣೆಗಳು ಹಾಗೂ ಲೋಕ ಸಭಾ ಚುನಾವಣೆಗಳು ಯಾವುದೇ ಚುನಾವಣೆಗಳನ್ನು ತೆಗೆದುಕೊಂಡರೆ, ಇವುಗಳಿಗೆ ನಡೆಯುವ ಏರ್ಪಾಡುಗಳ ಪರಿಯನ್ನು ಗಮನಿಸಿದರೆ ಒಂದು ಕ್ಷಣ ದಿಗ್ಭ್ರಾಂತರಾಗುವುದರಲ್ಲಿ ಸಂದೇಹವಿಲ್ಲ. ಸದಸ್ಯರುಗಳಾಗುವ ಮಹಾಪೂರವೇ ಸಜ್ಜಾಗುವಂತಿದೆ. ನಾಮ ಪತ್ರ ಸಲ್ಲಿಸುವ ಕೊನೆಯ ದಿನಗಳಲ್ಲಂತೂ ಮತ ಚಲಾಯಿಸಲು ಸಾಲಿನಲ್ಲಿ ನಿಲ್ಲುವಂತಹ ದೊಡ್ಡದೊಡ್ಡ ಸಾಲುಗಳನ್ನೇ ನಾಮ ಪತ್ರ ಸಲ್ಲಿಸಲು ಬರುತ್ತಿದ್ದವರ ಸಂಖ್ಯೆ ಕಾಣಬಹುದಾಗಿದೆ.

ಕಾರಣವಿಷ್ಟೆ ನಿರಾಯಾಸವಾಗಿ ಹಣಗಳಿಸಬಹುದಾದ ಕೇಂದ್ರಗಳು ಬಹುಮುಖ್ಯವಾಗಿ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಎಂಬುದು ಬಹಿರಂಗ ಸತ್ಯವೇ ಸರಿ. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ವಿಪರೀತವಾಗಿ ಹರಿದು ಬರುವ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಸದೇ, ಆಡಳಿತದಲ್ಲಿ ಪಾರದರ್ಶಕತೆಯನ್ನು ತರದೇ ಭ್ರಷ್ಟಾಚಾರದಲ್ಲಿ ತೊಡಗಿರುವುದು ವಿಪರ್ಯಾಸದ ಸಂಗತಿ.

ಇಂತಹ ಹತ್ತು ಹಲವು ಅಂಶಗಳನ್ನು ಗಮನಿಸಿದಾಗ ತಾಲ್ಲೂಕು ಪಂಚಾಯಿತಿಗೆ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಎಂತಹವರು ಸದಸ್ಯರಾಗಬೇಕು ಎಂಬ ದೂರಾಲೋಚನೆ ಅತಿಮುಖ್ಯ. ಕೇವಲ ವಿದ್ಯಾವಂತನಾದರೆ ಸಾಲದು, ಆತ ಸೇವಾ ಮನೋಭಾವದವನಾಗಿರಬೇಕು, ಉತ್ತಮ ಕೌಟುಂಬಿಕ ಹಿನ್ನೆಲೆಯ ವ್ಯಕ್ತಿತ್ವವುಳ್ಳವ ನಾಗಿರಬೇಕು, ಪ್ರಜೆಗಳ ಹಿತವನ್ನು ಕಾಪಾಡುವವನಾಗಬೇಕು. ದೇಶದ ಸಮೃದ್ಧಿಯ ಹರಿಕಾರನಾಗಬೇಕು. ಇಂತಹ ಉತ್ತಮ ಆಲೋಚನೆಗಳು ಹಾಗೂ ಪರಿಕಲ್ಪನೆಗಳನ್ನು

* ಉಪನ್ಯಾಸಕರು, ಗಾಂಧೀಭವನ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು drumeshmd@yahoo.in

ಮುಂದಿಟ್ಟುಕೊಂಡು ಮತದಾರರು ಯೋಚಿಸ ಬೇಕಾಗುತ್ತದೆ.

ಗಾಂಧೀಜಿಯವರು ಒಂದು ಕಡೆ ತುಂಬಾ ಅರ್ಥ ಪೂರ್ಣವಾಗಿ ಈ ವಿಚಾರವನ್ನು ಅರ್ಥೈಸಿದ್ದಾರೆ. "ಸರಳ ಜೀವನ ಮತ್ತು ಉನ್ನತ ವಿಚಾರ" (Simple Life and High Thinking) ಈ ಮೂಲಕ ಮತದಾರರು ಚಿಂತನೆಯನ್ನು ಮಾಡಿ ಆಲೋಚನೆ ಮಾಡಿ ನಮ್ಮೊಳಗಿನ ಯಾವ ವ್ಯಕ್ತಿಯನ್ನು ಆಯ್ಕೆಮಾಡಬೇಕು ಎಂಬ ಅರಿವು ಮೂಡಿಸಿಕೊಳ್ಳುವ ಹೊಣೆಗಾರಿಕೆ ಪ್ರಸ್ತುತ ಸಂದರ್ಭಗಳಲ್ಲಿ ಬಹು ಮುಖ್ಯವಾಗಿದೆ. ಈ ಆಲೋಚನೆಯನ್ನು ಗಂಭೀರವಾಗಿ ತೆಗೆದು ಕೊಳ್ಳಬೇಕಾದುದು ಅತ್ಯಗತ್ಯವಾಗಿದೆ.

ಚುನಾವಣೆಗಳಲ್ಲಿ ಜಾತಿ-ಪಕ್ಷ ಹಾಗೂ ಹಣ ಮಾರಕವಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಒಂದು ವ್ಯವಸ್ಥೆ ನಿರ್ನಾಮವಾಗಲು ಈ ಮೂರು ಅಂಶಗಳೇ ಸಾಕು. ಇವುಗಳಿಂದಲೇ ಒಂದು ವ್ಯವಸ್ಥೆ ಅಸ್ತವ್ಯಸ್ತಗೊಳ್ಳುತ್ತದೆ. ಉದಾತ್ತವಾಗಿದ್ದ ಪ್ರಜಾಪ್ರಭುತ್ವದ ನೈತಿಕ ಮೌಲ್ಯಗಳು ಅಧೋಗತಿಗೆ ಇಳಿಯುತ್ತಿವೆ. ಆದರ್ಶಗಳು ಅವನತಿಯ ಹಂತವನ್ನು ತಲುಪುತ್ತಿವೆ. ಚುನಾವಣಾ ಸಮಯದಲ್ಲಿ ಕಲುಷಿತ ವಾತಾವರಣ ಉಂಟಾಗುತ್ತಿದೆ. ಆದ್ದರಿಂದಲೇ, ಚುನಾವಣಾ ಸಮಯ ಸಮೀಪಿಸಿದಾಗ ಜಾತಿ, ಪಕ್ಷ ಹಾಗೂ ಹಣವನ್ನು ಮೀರಿದ ವಾತಾವರಣವನ್ನು ಕಾಣಬಹುದಾಗಿದೆ. ಇಂತಹ ಅನಿಷ್ಟ ಪದ್ಧತಿಗಳನ್ನು ಒಟ್ಟಾರೆ ಸೇರಿ ಪ್ರತಿರೋಧ ವ್ಯಕ್ತಪಡಿಸದ ಪಕ್ಷದಲ್ಲಿ ದೇಶವನ್ನು ರಕ್ಷಿಸುವುದು ತುಂಬಾ ಕಷ್ಟವಾಗುತ್ತದೆ. ಇಂತಹ ಅನಿಷ್ಟಗಳನ್ನು ಮನಸ್ಸಿನಿಂದಲೇ ಉಚ್ಚಾಟಿಸದಿದ್ದಲ್ಲಿ ಹಿಂದಿನ ಅವ್ಯವಸ್ಥೆಯನ್ನೇ ಯಥಾಸ್ಥಿತಿ ಮುಂದುವರೆಸಿ ಕೊಂಡು ಬಂದಂತಾಗುತ್ತದೆ. ಆನಂತರ ಎದುರಾಗುವ ಸಮಸ್ಯೆಗಳನ್ನು ಮೌನವಾಗಿಯೇ ಸಹಿಸಿಕೊಳ್ಳ ಬೇಕಾಗುತ್ತದೆ. ಆಗ ಪಶ್ಚಾತ್ತಾಪಪಟ್ಟರೂ ಪ್ರಯೋಜನವಿಲ್ಲದಂತೆ ಆಗುತ್ತದೆ. ಇದನ್ನೆಲ್ಲಾ ಗಮನಿಸಿದಾಗ ಪ್ರಜಾಪ್ರಭುತ್ವದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಬಲ್ಲಂತಹ ಉದಾತ್ತ ಆದರ್ಶಗಳು ಮತ್ತು ನೈತಿಕ ಮೌಲ್ಯಗಳು ಪ್ರತಿನಿಧಿಯಾದವನಿಗೆ ಇರಲೇಬೇಕು ಎಂಬ ಹಕ್ಕೊತ್ತಾಯ ಆತನನ್ನು ಆಯ್ಕೆ ಮಾಡುವವರಲ್ಲಿಯೂ ಇರಬೇಕಾದುದು ಇಂದಿನ ಸಂದರ್ಭಗಳಲ್ಲಿ ಅತ್ಯಗತ್ಯವಾಗಿದೆ.

ಪ್ರತಿನಿಧಿಗಳು ನಿರಾಯಾಸವಾಗಿ ಗಳಿಸಿದ ಹಣವನ್ನು ತಂದು ಆ ಮೂಲಕ ತಮ್ಮವರಿಗೆ ಅದರಲ್ಲಿ ತೊಡಗಿಸುವವರನ್ನು, ಹಕ್ಕುಗಳನ್ನು ಕೊಂಡುಕೊಳ್ಳು ವವರನ್ನು ದೂರವಿಡಲೇಬೇಕು. ಈ ಸಂದರ್ಭದಲ್ಲಿ ನಿರ್ಲಿಪ್ತತೆ ಹಾಗೂ ನಿರ್ಲಕ್ಷ್ಯತೆ ತುಂಬಾ ಅಪಾಯಕಾರಿ. ಯಾರು ಆಯ್ಕೆಯಾದರೆ ನಮಗೇನು ಎಂಬ ಉದಾಸೀನತೆ ತೋರಿದರೆ ಅಥವಾ ತಟಸ್ಥವಾಗಿ ಉಳಿದರೆ ಮುಂದೆ ಎದುರಾಗುವ ಇಲ್ಲಾ ಬವಣೆಗಳಿಗೆ ನಾವುಗಳು ಪಾತ್ರಧಾರಿ ಎಂಬ ಅವಲೋಕನ ಇಲ್ಲಿ ಅತ್ಯಂತ ಮುಖ್ಯ, ಇಂತಹ ಮನಸ್ಥಿತಿಯ ಅರಿವು ಮೂಡಿಸುವುದು ಸಹ ವಿದ್ಯಾವಂತರ ಕರ್ತವ್ಯವೂ ಆಗಬೇಕು.

ಈ ದಿನ ಚುನಾವಣೆಗಳು ಮಹತ್ವ ಪಡೆದು ಕೊಂಡಿರುವುದು ಮೇಲೆ ಹೇಳಿದಂತಹ ಹಣ ಲೂಟಿಗೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಪ್ರತಿನಿಧಿಗಳಲ್ಲಿ ಬಹಳಷ್ಟು ಜನ ನೈತಿಕ ಮೌಲ್ಯಗಳನ್ನು ಕಳೆದುಕೊಂಡ ವರಾಗಿದ್ದಾರೆ. ಇವರಲ್ಲಿ ಯೋಗ್ಯರೆಷ್ಟು ಎಂಬುದು ಅಲ್ಲಿನ ಎಲ್ಲರಿಗೂ ತಿಳಿದಿರುತ್ತದೆ. ಬಹಿರಂಗವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಆತನ ಬಗ್ಗೆ ಚರ್ಚೆ ನಡೆದೇ ಇರುತ್ತದೆ. ಆದರೆ, ಅಂತಿಮವಾಗಿ ಚುನಾವಣೆಯಲ್ಲಿ ಅವನೇ ಆಯ್ಕೆಯಾಗಿ ಬರುತ್ತಾನೆ. ಆತನೇ ಅಧಿಕಾರದ ಚುಕ್ಕಾಣಿ

ಹಿಡಿಯುತ್ತಾನೆ. ಇವರನ್ನು ತಿರಸ್ಕರಿಸದ ಹೊರತು ಪ್ರಜಾಪ್ರಭುತ್ವದ ಅಭ್ಯುದಯ ಸಾಧ್ಯವಿಲ್ಲ. ಇಂತವರನ್ನೇ ಪ್ರೇರೇಪಿಸುವ, ಅವರ ಆಪ್ತ ಸ್ನೇಹಿತರನ್ನಾಗಿಸಿ ಕೊಂಡಿರುವ ನೌಕರ ವರ್ಗ ಇಂತಹವರ ಗೆಲುವಿಗೆ ಪೂರಕವೂ ಆಗುತ್ತಾರೆ.

ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯತ್ವಗಳು ಲಕ್ಷಾಂತರ ರೂಪಾಯಿಗಳಿಗೆ ಹರಾಜಾಗುತ್ತಿರುವುದು ನಗ್ನ ಸತ್ಯ. ಇಂತಹ ಸಂದರ್ಭದಲ್ಲಿ ಆದರ್ಶ ಪ್ರಜಾಪ್ರಭುತ್ವದ ಪರಿಕಲ್ಪನೆಯು ಕನಸೇ ಸರಿ. ಚುನಾವಣೆಗಳಲ್ಲಿ ವ್ಯಾಪಾರಿ ಮನೋಭಾವ ಖಂಡಿತ ಸುಳಿಯಬಾರದು ಆಡಳಿತದ ಎಲ್ಲ ವ್ಯವಹಾರ ಪಾರದರ್ಶಕವಾಗಿರಬೇಕು. ಹಾಗಿರಬೇಕಾದರೆ ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಗುರುತರ ಹೊಣೆ ಮತದಾರರದ್ದಾಗಿರುತ್ತದೆ. ಆದರೆ ಕೊಂಚ ಯೋಚನೆ ಬೇಕಷ್ಟೆ. ಈ ಕಾರ್ಯ ನೆರವೇರಿದರೆ ಮಾತ್ರ ಮಹಾತ್ಮ ಗಾಂಧೀಜಿಯವರ ಆದರ್ಶ ರಾಜ್ಯ- ರಾಮ ರಾಜ್ಯದ ಕನಸಿನ ಕಲ್ಪನೆ ನನಸಾಗಲು ಸಾಧ್ಯವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

## ಗಾಂಧೀಜಿ ಮತ್ತು ಮೌಲ್ಯಗಳ ಪ್ರಸ್ತುತತೆ

ಆಧುನಿಕ ಜಗತ್ತಿನಲ್ಲಿ ಮೌಲ್ಯಗಳೆಲ್ಲ ಕುಸಿದಿರುವಾಗ ಗಾಂಧಿ ವಿಚಾರಧಾರೆಗಳು ಅತ್ಯಂತ ಪ್ರಸ್ತುತವೆನಿಸುತ್ತವೆ. ವಿಶ್ವದಿಗಂತದಲ್ಲಿ ಗಾಂಧೀಜಿಯುವರದು ಎದ್ದು ಕಾಣುವಂತಹ ವ್ಯಕ್ತಿತ್ವ. ಈ ವ್ಯಕ್ತಿತ್ವ ಕೇವಲ ಪಾಂಡಿತ್ಯದಿಂದ ಮಾತ್ರ ಬಂದುದಲ್ಲ. ಸತ್ಯ ಮತ್ತು ಅಹಿಂಸೆಯ ಅನುಷ್ಠಾನದಿಂದ ಬಂದದ್ದು. ಅವರದು ತೆರೆದ ಹೃದಯ, ತೆರೆದ ಮನಸ್ಸು, ಯಾವುದೇ ಸಮಾಜ, ರಾಷ್ಟ್ರ ವಿಕಾಸ ಹೊಂದಬೇಕಾದರೆ ಮಾನವೀಯ ಮೌಲ್ಯಗಳು ಅತಿ ಮುಖ್ಯ. ಈ ಮೌಲ್ಯಗಳ ಮೆಟ್ಟಿಲು ಏರಿಯೇ ಆತ ವಿಶ್ವಮಾನವನಾಗಬೇಕು. ಮೌಲ್ಯಗಳ ಹೊರತಾಗಿ ಮಾನವ ಮಾನವೀಯುವೆನಿಸಿಕೊಳ್ಳಲಾರ. ಈ ಮೌಲ್ಯಗಳು ಆತನ ಜೀವನದ ಉಸಿರಾಗಬೇಕು. ಅದನ್ನೇ ನಂಬಿ ಗಾಂಧೀಜಿ ತಮ್ಮ ಜೀವನದುದ್ದಕ್ಕೂ ಮನುಕುಲವನ್ನು ಎತ್ತಹಿಡಿಯುಲು ತಮ್ಮನ್ನು ಸಮರ್ಪಿಸಿಕೊಂಡರು. ಅವರ ಮೌಲ್ಯಾಧಾರಿತ ಜೀವನವನ್ನು ಗುರುತಿಸಲು ನಾವು ಕಷ್ಟಪಡಬೇಕಾಗಿಲ್ಲ. ಸರಳ ಬದುಕಿನ ಶ್ರೀಮಂತ ಚಿಂತನೆಯ ಧೀಮಂತ ವ್ಯಕ್ತಿತ್ವ ಅವರದ್ದು. ಮಾನವೀಯ ಮೌಲ್ಯಗಳ ದಾರಿಲ್ಲಿ ಗಾಂಧೀಜಿಯವರು ನಡೆಸಿದ ಪ್ರಯೋಗಗಳು ಬಳಸಿದ ಸತ್ಯ, ಅಹಿಂಸೆಯ ಪರಿಕರಗಳು ಜಾಗತಿಕ ಇತಿಹಾಸದ ಉಜ್ವಲ ಮಾದರಿಗಳು. ಕಾಲದ ಪರೀಕ್ಷೆಗೆ ಮತ್ತೆ ಮತ್ತೆ ಒಳಗಾಗಿ ತನ್ನ ಹೊಳಪು ಹೆಚ್ಚಿಸಿಕೊಳ್ಳುತ್ತಿರುವ 'ಗಾಂಧೀ ವಿಚಾರ ಧಾರೆಗಳು' ಹಿಂದೆಂದಿಗಿಂತಲೂ ಇಂದು ನಮಗೆ ಹೆಚ್ಚು ಪ್ರಸ್ತುತ. ಗಾಂಧೀಜಿಯವರ ರಚನಾತ್ಮಕ ವಿಚಾರಗಳು ಜನರನ್ನು ದ್ವೇಷ, ಅಸೂಯೆ, ಹಿಂಸೆಯಿಂದ ಮುಕ್ತಗೊಳಿಸಿ ಮಾನವನನ್ನಾಗಿ ಮಾಡುತ್ತವೆ. ಹೀಗಾಗಿ ಜಗತ್ತಿನ ಯಾವುದೇ ವಿಚಾರ ಗಾಂಧೀ ತತ್ವಗಳನ್ನು ಹೊರತುಪಡಿಸಿ ಮೌಲಿಕವಾಗಲಾರದು. ಮಾರಕ ಅಣ್ವಸ್ತ್ರಗಳ ಅಪಾರ ರಾಶಿಯ ಮನುಕುಲದ ಸರ್ವನಾಶಕ್ಕೆ ಸಮರ ಸಾರಿರುವ ಭಯೋತ್ಪಾದನೆಯ ಸಂದರ್ಭದಲ್ಲಿ ಸರಳಯುತ ಗಾಂಧಿ ತತ್ವಗಳು ಅತ್ಯಂತ ಪ್ರಸ್ತುತ ವೆನಿಸುತ್ತವೆ.

ಭಾರತೀಯ ಸಂಸ್ಕೃತಿ ಅವಿಚ್ಛಿನ್ನವಾಹಿನಿ; ಅವಿರತವಾಹಿನಿ. ಅದು ಎಂದೂ ನಿಂತ ನೀರಲ್ಲ. ಪರಂಪರಾನುಗತವಾಗಿ ಬಂದ ಅಮೂಲ್ಯವಾದ ಶಾಶ್ವತ ಮೌಲ್ಯಗಳನ್ನು ಅದು ರಕ್ಷಿಸಿಕೊಂಡು ಬಂದಿದೆ. ಸತ್ಯ, ಧರ್ಮ, ಪ್ರೇಮ, ಅಹಿಂಸೆ ಮುಂತಾದವು ಶಾಶ್ವತ ಜೀವನ ಮೌಲ್ಯಗಳು. ಪರದೇಶಗಳ ಸಂಸ್ಕೃತಿಗಳೊಡನೆ ಸಂಪರ್ಕ ಬೆಳೆದಾಗ ಆ ಸಂಸ್ಕೃತಿಗಳ ಉತ್ತಮ

ಮೌಲ್ಯಗಳನ್ನು ತನ್ನದಾಗಿ ಮಾಡಿಕೊಂಡು ವೈವಿಧ್ಯತೆಯನ್ನು ಮರೆದಿರುವುದು ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆ. ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಸಮಾಜದಲ್ಲಿ ದುಷ್ಟ ಸಂಪ್ರದಾಯಗಳು ತಲೆದೋರಿದಾಗ, ಹಳೆಯ ಮೌಲ್ಯಗಳು ಸವಕಲಾದಾಗ ಅವುಗಳನ್ನು ತೊಡೆದುಹಾಕುವ ಕೆಲಸ ಕಾಲಕಾಲಕ್ಕೆ ನಡೆದು ಬಂದಿದೆ. ಬೇರೆ ದೇಶಗಳಲ್ಲಿ ಸಮಾಜ ಸುಧಾರಣೆ ಅಥವಾ ಪರಿವರ್ತನೆಗೆ ತೀವ್ರ ಕ್ರಾಂತಿಗಳು, ಹಿಂಸಾತ್ಮಕ ಆಂದೋಲನಗಳು ಅಗತ್ಯವಾಗಿ ಕಂಡುಬಂದಿವೆ. ಆದರೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಹೀಗೆ ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು ಅಪ್ರತಿಮ ಪಾತ್ರ ವಹಿಸಿದ್ದಾರೆ.

ಹಳಸಿ ಹೋದ ಮೌಲ್ಯಗಳನ್ನು, ಕುರುಡು ಸಂಪ್ರದಾಯಗಳನ್ನು, ದುಷ್ಟ ಕಟ್ಟಳೆಗಳನ್ನು ಗುರುತಿಸಿ ಅವುಗಳನ್ನು ತೊಡೆದುಹಾಕಲು ಕಂಕಣಬದ್ಧರಾದವರು ಮಹಾತ್ಮರು, ಸಂತರು ಮತ್ತು ಸುಧಾರಕರು. ತಾವು ಕಂಡ ಸತ್ಯವನ್ನು, ತಾವು ಒಪ್ಪಿದ ಹೊಸ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತರಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದು ಕಂಡರೂ ಇದರ ಫಲ ಶಾಶ್ವತ. ಇದರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ. ಈ ರೀತಿಯಲ್ಲಿ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೇ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚುಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿದಾಗ ಅವರ ಜೀವನಕ್ರಮದಲ್ಲಿ, ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತನೆಯಾಗುತ್ತದೆ.

ಮನುಷ್ಯನು ಬದುಕಿದರೆ ಮೌಲ್ಯಗಳಿಗೋಸ್ಕರ ಬದುಕಬೇಕು. ಮೌಲ್ಯಗಳು ಇಲ್ಲದ ಜೀವನವು ಜೀವನವೇ ಅಲ್ಲ. ಮನುಷ್ಯ ಯಾರೇ ಇರಲಿ, ತನ್ನ ಬದುಕಿನಲ್ಲಿ ಬೆಲೆ ಕೊಟ್ಟು ಆಚರಿಸಿಕೊಂಡು ಹೋಗಬೇಕಾದ ಮೌಲ್ಯಗಳು ಶಾಶ್ವತ ಮೌಲ್ಯಗಳು ಇದ್ದೇ ಇವೆ. ಆ ಮೌಲ್ಯಗಳ ಪ್ರಶ್ನೆ ಬಂದರೆ ಮನುಷ್ಯ ಯಾರೊಂದಿಗೂ, ಯಾವುದರೊಂದಿಗೂ ಸಂದಾನ ಮಾಡಿಕೊಳ್ಳಬಾರದು. ತಾನು ಒಬ್ಬನೇ ಆದರೂ ಚಿಂತೆಯಿಲ್ಲ. ಮನುಷ್ಯನು ತಾನು ನಂಬಿದ ಮೌಲ್ಯಗಳಿಗೆ ಅಂಟಿ ನಿಲ್ಲಬೇಕು. ಮೌಲ್ಯಗಳಿಲ್ಲದ ಮನುಷ್ಯ ಕಳೆದು ಹೋಗುವಂತೆ, ಮೌಲ್ಯಗಳು ಇರುವ ಮನುಷ್ಯ ಎಂದೂ ಕಳೆದುಹೋಗುವುದಿಲ್ಲ.

ಮಾನವನು ಮಾಡುವ ಕಾರ್ಯಗಳಿಗೆ ಅವನು ನಂಬಿದ ಮೌಲ್ಯಗಳಿಂದಲೇ ಪ್ರೇರಣೆ ಲಭಿಸಬೇಕು. ಮನುಷ್ಯನು ಅನುಭವಿಸುವ ಸುಖ-ದುಃಖಗಳೇನೇ ಇದ್ದರು, ಅವು ಅವನು ಮಾಡುವ ಕೆಲಸದಿಂದಲೇ ಚಿಮ್ಮಿ ಬರುತ್ತವೆ. ಜೀವನವು ಕೇವಲ ಮೌಲ್ಯಗಳನ್ನು ಹೇಳುವುದರಲ್ಲಿ ಇಲ್ಲ. ಆ ಮೌಲ್ಯಗಳನ್ನು ಆಚರಣೆಗೆ ತರುವುದರಲ್ಲಿ ಇದೆ. ಮನುಷ್ಯನು ಮೌಲ್ಯಗಳನ್ನು ತಿಳಿದರೆ ಸಾಲದು, ಅವುಗಳನ್ನು ನಂಬಬೇಕು, ಪ್ರೀತಿಸಬೇಕು, ಪ್ರತ್ಯಕ್ಷಮಾಡಿ ತೋರಿಸಬೇಕು ಎಂಬುದನ್ನು ಗಾಂಧೀಜಿಯವರು ಅತ್ಯಂತ ಮನಮುಟ್ಟುವ ರೀತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಾವ್ಯ ವಿಕಾಸ

# ಮಕ್ಕಳ ಗ್ರಾಮ ಸಭೆ

ಗ್ರಾಮ ಸಭೆ ಇದು ಮಕ್ಕಳ ಗ್ರಾಮ ಸಭೆ
ಮಕ್ಕಳ ಹಕ್ಕೋತ್ತಾಯದ ಪ್ರಮುಖ ಸಭೆ

ಶಾಲೆಯ ಶಾಲಾಭಿವೃದ್ಧಿ ಸಮಿತಿ- ಪಂಚಾಯ್ತಿ ಒಡಗೂಡಿ
ಮಕ್ಕಳಿಂದ, ಮಕ್ಕಳಿಗೋಸ್ಕರ, ಮಕ್ಕಳಿಗಾಗಿ ನಡೆಯುವ ಗ್ರಾಮ ಸಭೆ //ಪ//

ಇಂದಿನ ಮಕ್ಕಳೇ ನಾಳಿನ ಪ್ರಜೆಗಳೆಂದು ತಿಳಿದು
ಸಂವಿಧಾನದ ಆಶಯದಂತೆ ಮೂಲಭೂತ ಹಕ್ಕುಗಳಲ್ಲಿ
ಮಕ್ಕಳಿಗೂ ಎಲ್ಲಾಕಡೆ ಭಾಗವಹಿಸುವ ಹಕ್ಕಿನೆಡೆಯಲ್ಲಿ
ಶಾಲಾ-ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ನಡೆಯುವ ಪ್ರಧಾನ ಸಭೆ // ಗ್ರಾಮ ಸಭೆ//

ಪ್ರಜಾಪ್ರಭುತ್ವದ ಅರ್ಥವ ತಿಳಿದು
ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಕಲಿತು
ಗ್ರಾಮ ಪಂಚಾಯ್ತಿ ಸದಸ್ಯ-ಅಧ್ಯಕ್ಷರೊಡಗೂಡಿ
ಪಂಚಾಯ್ತಿಯ ಸೌಲಭ್ಯಗಳ ಪಡೆಯುವ ಸೂಕ್ತ ವೇದಿಕೆ ಈ ಸಭೆ // ಗ್ರಾಮ ಸಭೆ//

ವಿವಿಧ ಇಲಾಖೆಗಳ ಅಧಿಕಾರಿಗಳು ಬಂದು
ಗ್ರಾಮದ ಪ್ರಮುಖ ಮುಖಂಡರ ಕರೆಸಿ
ಶಿಕ್ಷಕರ ಸಮ್ಮುಖದಲ್ಲಿ ಶಾಲೆ ಮತ್ತು ಗ್ರಾಮಗಳ
ಸಮಸ್ಯೆಗಳ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಸಹಕಾರ ಸಭೆ //ಗ್ರಾಮ ಸಭೆ//

ಗ್ರಾಮ ಸ್ವರಾಜ್, ಸಂಪೂರ್ಣ ಸ್ವಚ್ಛತಾ ಆಂಧೋಲನ, ಸುವರ್ಣಗ್ರಾಮ,
ಮಹಾತ್ಮಗಾಂಧಿರಾಷ್ಟ್ರೀಯಗ್ರಾಮೀಣಉದ್ಯೋಗಖಾತ್ರಿ, ಇಂದಿರಾಆವಾಜ್,
ಬಸವ ವಸತಿ ಯೋಜನೆಗಳ ಪ್ರಯೋಜನಗಳನ್ನು
ಪಡೆಯುವ ವಿಧಾನಗಳ ಅರಿಯಲು ಪ್ರಯೋಜನಕಾರಿ ಸಭೆ // ಗ್ರಾಮ ಸಭೆ//

**ಜಿ.ವೆಂಕಟೇಶ್, ಬಿ.ಕಾಂ.**
ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್, ಅಗರ ಗ್ರಾಮ ಪಂಚಾಯತಿ
ಕೆಂಗೇರಿ ಹೋಬಳಿ, ಬೆಂಗಳೂರು ದ. ತಾಲ್ಲೂಕು, ಬೆಂಗಳೂರು-560069
ಮೋ.ನಂ. 9686537660

ಯಶೋಗಾಥೆ

# ನಾವು ನಮ್ಮೂರ ಅಭಿವೃದ್ದಿ : ಸ್ವತಃ ಕೂಲಿಗಳಾಗಿ ದುಡಿದು ಕರ್ತವ್ಯ ಮೆರೆದವರು



ನಾಗರಾಜ ಆರ್.ಎಚ್.

ಗ್ರಾಮ ಪಂಚಾಯತ್ ಅಧ್ಯಕ್ಷರು, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರುಗಳು ಹಾಗೂ ವಿದ್ಯಾರ್ಥಿಗಳ ಪಾಲಕರು ಎಲ್ಲರೂ ಕೂಲಿಗಳಾಗಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡು ಅಭಿವೃದ್ಧಿ ಕಾರ್ಯಕ್ಕೆ ಕೈಜೋಡಿಸಿರುವುದು ಪ್ರಶಂಸನೀಯವಾಗಿದೆ.

ಅಭಿವೃದ್ದಿ ಎನ್ನುವದು ನಿರಂತರ. ಅದಕ್ಕೆ ಆರಂಭ ಮತ್ತು ಮುಕ್ತಾಯದ ಚೌಕಟ್ಟಿಲ್ಲ. ಯಾವುದೇ ಕಾರ್ಯಯೋಜನೆಯು ಅನುಷ್ಠಾನಗೊಂಡು ಅದರ ಪ್ರತಿಫಲವು ಅಲ್ಲಿಯ ಸಮುದಾಯಕ್ಕೆ ಹಾಗೂ ಜನರಿಗೆ ಲಭ್ಯವಾಗುವಂತಾದರೆ ಅಲ್ಲಿ ಅಭಿವೃದ್ದಿಯಾಗಿದೆ ಎಂದರ್ಥ.

ಅಭಿವೃದ್ದಿಯ ಸಂಕಲ್ಪವು ಕೇವಲ ಆಡುಭಾಷೆಯಲ್ಲಿರದೇ ಸಮರ್ಪಕ ಯೋಜನೆ ತಯಾರಿ, ಅನುಷ್ಠಾನ ಹಾಗೂ ಸಮುದಾಯದ ಸಕ್ರಿಯ ತೊಡಗಿಕೊಳ್ಳುವಿಕೆಯು ಕೂಡ ಅಷ್ಟೇ ಮುಖ್ಯವಾಗಿದೆ. ಕಾರಣ ಪ್ರತಿಫಲದ ಉತ್ತರದಾಯಿತ್ವವು ಅಲ್ಲಿಯ ಸಮುದಾಯಕ್ಕೆ ಸೇರುತ್ತದೆ. ಅದಕ್ಕೆ ಗ್ರಾಮದಲ್ಲಿ ಒಂದು ಸಾಂಘಿಕ ಮನೋಭಾವನೆ ಅತಿ ಮುಖ್ಯವಾಗಿದೆ. ಅಂದಾಗ ಮಾತ್ರ ಅಲ್ಲೊಂದು ಬದಲಾವಣೆ ಕಾಣಲು ಸಾಧ್ಯ.



ಆದರೆ ಅಂತಹ ಮನೋಭಾವವು ಎಲ್ಲ ಕಡೆಯಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ಕೆಲವೆಡ ಸಮುದಾಯ, ಸಂಘಸಂಸ್ಥೆಗಳು ಹಾಗೂ ಸ್ಥಳಿಯ ಗ್ರಾಮ ಪಂಚಾಯತ್‌ಗಳು ಸೇರಿ ತಮ್ಮ ಹಂತದಲ್ಲಿ ಸರಕಾರದ ಯೋಜನೆಯನ್ನು ಸಮರ್ಪಕವಾಗಿ ಅನಷ್ಠಾನಗೊಳಿಸುವ ಮೂಲಕ ಇನ್ನೊಬ್ಬರಿಗೆ ಮಾದರಿಯಾದ ಉದಾಹರಣೆಗಳಿವೆ.

ಅಂತಹ ಒಂದು ಸಮುದಾಯದ ಸಾಂಘಿಕ ಪ್ರಯತ್ನದ ಮಾದರಿಯನ್ನು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಆಚವೆ ಗ್ರಾಮ ಪಂಚಾಯತ್‌ದಲ್ಲಿ ಕಾಣಬಹುದಾಗಿದೆ. ಸ್ವತ; ಗ್ರಾ.ಪಂ ಸದಸ್ಯರು, ಶಾಲಾಭಿವೃದ್ದಿ ಸಮಿತಿಯ ಸದಸ್ಯರುಗಳು ಮತ್ತು ಪಾಲಕರು ಸ್ವತ: ಕೂಲಿಗಳಾಗಿ ತಮ್ಮ ಗ್ರಾಮದ ಶಾಲಾ ಮೈದಾನವನ್ನು

ಸೋಶಿಯಲ್ ಆಡಿಟ್, ಕಾರವಾರ, ಅಂಚೆ : ಬಿಣಗಾ, ತಾ: ಕಾರವಾರ– 581 307 ಜಿಲ್ಲೆ : ಉತ್ತರ ಕನ್ನಡ

ಅಭಿವೃದ್ಧಿಗೊಳಿಸಿದ್ದಾರೆ. ಇಲ್ಲಿ ಇವರು ಕೂಲಿಗಳೆನ್ನುವದಕ್ಕಿಂತ ನಮ್ಮೂರು ನಮ್ಮ ಶಾಲೆಯ ಅಭಿವೃದ್ಧಿಗೆ ಸರಕಾರದ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿರುವದುಇತರರಿಗೆ ಮಾದರಿಯಾಗಿದೆ.

ಆಚವೆ ಗ್ರಾಮ ಪಂಚಾಯತ್ ಗುಡ್ಡ ಬೆಟ್ಟಗಳಿಂದ ಕೂಡಿದ ಗ್ರಾಮ. ತಾಲ್ಲೂಕು ಕೇಂದ್ರದಿಂದ ಸುಮಾರು ಮೂವತ್ತೈದು ಕಿ.ಮಿ. ದೂರದಲ್ಲಿದೆ. ಅರಣ್ಯ ಪ್ರದೇಶಗಳಿಂದ ಸುತ್ತುವರಿದ ಆಚವೆಯು ಎರಡು ಕಂದಾಯ ಗ್ರಾಮಗಳನ್ನು ಹೊಂದಿದ್ದು, ಆರು ಹಳ್ಳಿಗಳಿವೆ. ಮೂರು ವಾರ್ಡುಗಳು 8 ಜನ ಗ್ರಾಮ ಪಂಚಾಯತ್ ಸದಸ್ಯರಿದ್ದಾರೆ. ಒಟ್ಟು ಜನಸಂಖ್ಯೆ 4105. ಇಲ್ಲಿ ಎಲ್ಲ ಸಮುದಾಯದ ಜನರಿದ್ದಾರೆ. ಹೆಚ್ಚಿನ ಸಂಖ್ಯೆಯ ಕುಟುಂಬಗಳು ಕೃಷಿ ಜೀವನಾಧಾರವಾಗಿ ತಮ್ಮ ಬದುಕನ್ನು ಸವೆಸುತ್ತಿದ್ದಾರೆ.

## ಸಾಂಘಿಕ ಪ್ರಯತ್ನ : ಸಮುದಾಯದ ಭಾಗಿದಾರಿಕೆ

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆಯಲ್ಲಿ ಈ ಗ್ರಾಮ ಪಂಚಾಯತ್‌ದಲ್ಲಿ ಕಾಲುವೆ, ಕೃಷಿ ನೀರಾವರಿ ಬಾವಿ, ವಯಕ್ತಿಕ ಜಮೀನು ಅಭಿವೃದ್ಧಿ ಸೇರಿದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಘೋಷಣೆಯಾದ ಹದಿನೈದು ಅಂಶಗಳ ಕಾರ್ಯಕ್ರಮಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಿದ್ದಾರೆ. ದುಡಿಯುವ ಕೈಗಳು ಇಲ್ಲಿ ತಾವಾಗಿಯೆ ಕೆಲಸವನ್ನು ಕೇಳಿ ಬರುತ್ತಿವೆ. ಕೂಲಿ ಕಾರ್ಮಿಕರನ್ನು ಕೂಲಿಯ ಪಟ್ಟಿಯಲ್ಲಿ (ಎನ್.ಎಂ.ಆರ್) ಹೆಸರಿಸಿ ಕೆಲಸವನ್ನು ಮಾಡಿಸಿ ಕೂಲಿ ಮೊತ್ತವನ್ನು ಬ್ಯಾಂಕಿಗೆ ಜಮಾವಣೆ ಮಾಡುವದು ನಿಯಮದಂತೆ ನಡೆದು ಬಂದಿರುವಂತದ್ದು.

ಒಂದು ಕೆಲಸಕ್ಕೆ ಜನರನ್ನು ಸೇರಿಸುವದು ಕಷ್ಟದ ಕೆಲಸ. ಅಂತಹದ್ದರಲ್ಲಿ ಗ್ರಾಮ ಪಂಚಾಯತಿಯ ಸದಸ್ಯರುಗಳು ಹಾಗೂ ಶಾಲಾಭಿವೃದ್ಧಿ ಸಮಿತಿ (ಎಸ್.ಡಿ.ಎಂ.ಸಿ) ಅಧ್ಯಕ್ಷರು–ಉಪಾಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ಸ್ವತ: ಸಲಿಕೆ ಹಾಗೂ ಬುಟ್ಟಿಯನ್ನು ಹಿಡಿದುಕೊಂಡು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕುಂಟಗಣಿ ಎನ್ನುವ ಗ್ರಾಮದ ಹಿರಿಯ



ಪ್ರಾಥಮಿಕ ಶಾಲಾ ಆಟದ ಮೈದಾನವನ್ನು ಅಭಿವೃದ್ಧಿಗೊಳಿಸಿದ್ದಾರೆ.

## ಸ್ವಯಂ ಪ್ರೇರಣೆ

ಶಾಲೆ ಎನ್ನುವದು ಸಮುದಾಯದ ಆಸ್ತಿ. ಇಲ್ಲಿ ಕಲಿಯುವ ಮಕ್ಕಳು ತಮ್ಮವರು. ಇದರ ಅಭಿವೃದ್ಧಿಗೆ ಸರಕಾರದ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಎಲ್ಲರಲ್ಲಿ ಮೂಡಿ ಬಂದ ಒಂದು ಯೋಚನೆಯ ಎಲ್ಲರನ್ನು ಸ್ವಯಂ ಪ್ರೇರಣೆಯಿಂದ ಕಾಮಗಾರಿಗೆ ಚಾಲನೆ ನೀಡಿತು.

ಒಟ್ಟು ಇಪ್ಪತ್ತೇಳು ಕೂಲಿಗಳು 328 ಮಾನವ ದಿನಗಳಲ್ಲಿ ಕುಂಟಗಣಿ ಹಿರಿಯ ಪ್ರಾಥಮಿಕ ಶಾಲೆಗೆ ಒಂದು ಸುಸಜ್ಜಿತವಾದ ಆಟದ ಮೈದಾನವನ್ನು ನಿರ್ಮಿಸಿಕೊಂಡಿದ್ದಾರೆ. ಕಾಮಗಾರಿಯ ಕ್ರಿಯಾ ಯೋಜನೆಯ ಮಂಜೂರಿಯನ್ನು ಪಡೆದು ತಾಂತ್ರಿಕ ಅನುಮೋದನೆ ಅಂದಾಜು ಪಟ್ಟಿ ಸಿದ್ದವಾದ ಮೇಲೆ ಮುಂದಿನ ಕ್ರಮ ಯಾರನ್ನು ಕೂಲಿಗಳಾಗಿ ಬಳಸುವದು ಎನ್ನುವ ಪ್ರಶ್ನೆ.

## ಸ್ವತ: ಕೂಲಿಗಳಾದರು ಇವರು

ಆದರೆ ಈ ಕಾಮಗಾರಿಯಲ್ಲಿ ಆಗಿದ್ದು ಬೇರೆ. ಕೂಲಿಗಳಾಗಿ ಸ್ವತ: ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಶಾಲಾಭಿವೃದ್ಧಿ ಸಮಿತಿ(ಎಸ್.ಡಿ.ಎಂ.ಸಿ)ಯವರು ಮತ್ತು ಮಕ್ಕಳ ಪಾಲಕರು ಕೂಲಿಗಳಾಗಿ ಮುಂದೆ ಬಂದರು. ಇವರೆಲ್ಲರೂ ಉದ್ಯೋಗ ಚೀಟಿಯನ್ನು ಹೊಂದಿದವರೇ ಆಗಿದ್ದಾರೆ.



ಶ್ರೀ ಶಿವಾನಂದ ಧಾರೇಶ್ವರ ಶಿರೋಡ್ಕರ, ಶ್ರೀಮತಿ ಲಲಿತಾ ಮೋಹನ ಸಿದ್ದಿ ಗ್ರಾಮ ಪಂಚಾಯತ್ ಸದಸ್ಯರುಗಳು, ಶ್ರೀ ಈಶ್ವರ ಭೈರವೇಶ್ವರ ಭಟ್ ಎಸ್.ಡಿ.ಎಂ.ಸಿ ಅಧ್ಯಕ್ಷರು, ಇವರೊಂದಿಗೆ ಎಸ್.ಡಿ.ಎಂ.ಸಿ ಸದಸ್ಯರುಗಳಾದ ಶ್ರೀ ಪ್ರಕಾಶ ನಾಯಕ, ಶ್ರೀಮತಿ ಜ್ಯೋತಿ ಗುನಗಾ, ಶ್ರೀ ಮೋಹನ ಹಸನ ಸಿದ್ದಿ, ಇವರ ಜೊತೆ ಮಕ್ಕಳ ಪಾಲಕರು ಕೂಡ ಈ ಒಂದು ಕಾಮಗಾರಿಯಲ್ಲಿ ಕೂಲಿಗಳಾಗಿ ದುಡಿದರು. ಪರಿಣಾಮವಾಗಿ ಕುಂಟಗಣಿ ಹಿ.ಪ್ರಾ ಶಾಲೆಯು ಸುಮಾರು ಮೂರನೂರು ಮೀಟರ್ ಉದ್ದದ ವ್ಯವಸ್ಥಿತವಾದ ಆಟದ ಮೈದಾನ ಸಿದ್ಧವಾಗಲು ಕಾರಣವಾಯಿತು.

ತಮ್ಮ ಶಾಲೆಗೊಂದು ಆಟದ ಮೈದಾನ ಅಭಿವೃದ್ಧಿ ಪಡಿಸಿಕೊಡಬೇಕೆಂಬ ಬೇಡಿಕೆಯನ್ನು ಗ್ರಾ.ಪಂಗೆ ನೀಡಲಾಗಿತ್ತು. ಅಧ್ಯಕ್ಷರಾದ ಶ್ರೀಮತಿ ನಾಗಮ್ಮ ಹಳ್ಳೇರ ಮತ್ತು ಉಪಾಧ್ಯಕ್ಷರಾದ ಶ್ರೀ ಹನುಮಾ ಬಿ.ಗೌಡ ಇವರ ಸಹಕಾರದಲ್ಲಿ ಶಾಲೆಯ ಆಟದ ಮೈದಾನವು ಅಭಿವೃದ್ಧಿ ಕಾಣುವಂತಾಯಿತು. ಮೊದಲು ತಮ್ಮ ಮಕ್ಕಳಿಗೆ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಆಗುತ್ತಿರಲಿಲ್ಲ. ಈಗ ನಾವು ಮಾಡಿದ ಅಭಿವೃದ್ಧಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಹಿಂದಿನ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀ ಈಶ್ವರ ಭೈರವೇಶ್ವರ ಭಟ್ ಅವರು.

ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ ಶ್ರೀಮತಿ ಲಲಿತಾ ಮೋಹನ ಸಿದ್ದಿಯವರು ಹಾಗೂ ಗ್ರಾ.ಪಂ ಸದಸ್ಯರಾದ ಶ್ರೀ ಶಿವಾನಂದ ಧಾರೇಶ್ವರ ಶಿರೋಡ್ಕರ ಅವರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದರು. ಶಾಲೆ ನಮ್ಮೂರಿನ ಆಸ್ತಿ. ಅದರ ಬೆಳವಣಿಗೆ ಹಾಗೂ ಅಭಿವೃದ್ಧಿ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಸರಕಾರದ ಯೋಜನೆಯಿಂದ ಊರಿನಲ್ಲಿ ಅಭಿವೃದ್ಧಿ ಕೆಲಸವಾಗುತ್ತದೆ ಎಂದಾದರೆ ನಾವೆಲ್ಲರೂ ಪಾಲ್ಗೊಳ್ಳಬೇಕಾಗಿರುವ ನಮ್ಮ ಕರ್ತವ್ಯವಾಗಬೇಕು. ಆ ಕರ್ತವ್ಯವನ್ನು ಜವಾಬ್ದಾರಿಯನ್ನು ನಾವು ನಿಭಾಯಿಸಿದ್ದೇವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಟಿ.ಸಿ.ಮಂಜುನಾಥ ಅವರ ಸಲಹೆ ಮಾರ್ಗದರ್ಶನವೂ ಇದಕ್ಕೆ ಇತ್ತು ಎಂದರು.

ಸರಕಾರದ ಯೋಜನೆಯೊಂದು ಸಮರ್ಪಕವಾಗಿ ಅನುಷ್ಠಾನಗೊಂಡು ಅದರ ಪ್ರಯೋಜನವು ಆ ಗ್ರಾಮಕ್ಕೆ ದೊರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಶಾಲಾ ಆಟದ ಮೈದಾನ ಅಭಿವೃದ್ಧಿಯಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಉತ್ತಮವಾಗಿತ್ತು. ಅವರೆಲ್ಲರ ಸಹಕಾರದಿಂದ ಇದು ಸಾಧ್ಯವಾಯಿತು ಎಂದು ಪಿಡಿಓ ಟಿ.ಸಿ. ಮಂಜುನಾಥ ಅಭಿಪ್ರಾಯಿಸಿದರು.

ಗ್ರಾ.ಪಂ ಸದಸ್ಯರು ಹಾಗೂ ಎಸ್.ಐ.ಆರ್.ಡಿ ಮೈಸೂರು ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳೂ ಆದ ಶ್ರೀ ಬಾಲಚಂದ್ರ ಶೆಟ್ಟಿ,ಕುಂಟಗಣಿ ಇವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಒತ್ತಾಯ ಪೂರ್ವಕವಾಗಿ ಜನ ಸಂಘಟನೆಯನ್ನು ಮಾಡಿ, ಮಾಡಿಸುವ ಕೆಲಸಕ್ಕೂ ಸ್ವಯಂ ಪ್ರೇರಣೆಯಿಂದ ತಮ್ಮದೆನ್ನುವ ಮನೋಭಾವದಿಂದ ಬರುವದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಯಾವುದೇ ಅಭಿವೃದ್ಧಿಪರ ಚಿಂತನೆಗಳಿಗೆ ಹಾಗೂ ಕೆಲಸಗಳಿಗೆ ಸ್ವಯಂ ಸ್ಫೂರ್ತಿ ಅತಿಮುಖ್ಯ. ಇಲ್ಲಿ ಎಲ್ಲರೂ ತಮ್ಮ ತಮ್ಮ ಹುದ್ದೆಯನ್ನು ಮರೆತು ಶಾಲೆಯ ಅಭಿವೃದ್ದಿಗೆ ಕೈ ಜೋಡಿಸಿದ್ದಾರೆ. ನಿಜಕ್ಕೂ ಇದು ಪ್ರಶಂಸನಿಯವಾಗಿದೆ ಎಂದರು.

## ಕ.ವಿ.ಯ.(ಕ್ಷ) ಪ್ರಶ್ನೆಗಳು...

# ನಗುವುದನ್ನು ಕಲಿಯಲು ಶಾಲೆಗೆ ಹೋಗಬೇಕೆ?

ಅನಾದಿ ಕಾಲದಿಂದಲೂ ಮನುಷ್ಯ ಹೊಟ್ಟೆಗಾಗಿ, ಬಟ್ಟೆಗಾಗಿ, ಕಷ್ಟಪಡುತ್ತಲೇ ಬರುತ್ತಿದ್ದಾನೆ. ಇವತ್ತಿಗೂ ನಾವು ತುತ್ತು ಅನ್ನಕ್ಕಾಗಿ, ಬಟ್ಟೆಗಾಗಿ, ಇರಲು ಸೂರಿಗಾಗಿ ಕಷ್ಟಪಡುತ್ತಲೇ ಇದ್ದೇವೆ. ಐಶಾರಾಮಿ ಜೀವನ ನಡೆಸುವುದೇ ನಮ್ಮ ಗುರಿಯನ್ನಾಗಿಟ್ಟುಕೊಂಡಿರುವ ನಾವು ನಮ್ಮ ಆರೋಗ್ಯದ ಬಗ್ಗೆ ಯೋಚಿಸುವುದಕ್ಕೂ ಸಮಯವನ್ನು ಕೊಡದೆ, ಕೆಲಸ ಮಾಡುತ್ತಾ ನಗುವುದನ್ನೇ ಮರೆತು ಬಿಟ್ಟಿದ್ದೇವೆ.

ಹಿಂದೆಲ್ಲಾ ಕೂಡು ಕುಟುಂಬಗಳಿದ್ದು, ಎಲ್ಲರೂ ಒಟ್ಟಿಗೆ ಕೂಡಿ, ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು, ಊಟ ಮಾಡುವುದು, ಕಳೆದ ದಿನಗಳು/ಕ್ಷಣಗಳ ಬಗ್ಗೆ ನೆನೆದು ಸಂತೋಷ ಪಡುತ್ತಿದ್ದರು

ಇಂದು ಹಣ ಮಾಡುವ ತವಕದಲ್ಲಿ ಕೆಲಸದ ಒತ್ತಡ, ವಾಯುಮಾಲಿನ್ಯ, ಅಶುದ್ಧ ನೀರು ಇತ್ಯಾದಿಗಳಿಂದಾಗಿ ಅಧಿಕ ರಕ್ತದೊತ್ತಡ, ಮದುಮೇಹದಂತಹ ಖಾಯಿಲೆಗಳಿಂದ ಬಳಲುವುದು ಸಾಮಾನ್ಯವಾಗಿಬಿಟ್ಟಿದೆ. ಬೆಳಿಗ್ಗೆ ವಾಯುವಿಹಾರಕ್ಕೆ ಉದ್ಯಾನವನಕ್ಕೆ ಹೋದಾಗ ಕೆಲವರು ಹಲವಾರು ರೀತಿಯಲ್ಲಿ ನಗುವುದನ್ನು ನೋಡುತ್ತೇವೆ. ಹೀಗೆ ನಾವುಗಳು ನಗುವುದಕ್ಕಾಗಿಯೇ ಶಾಲೆಗಳಿಗೆ ಹೋಗುವ ಪರಿಸ್ಥಿತಿ ತಂದುಕೊಂಡಿದ್ದೇವೆ. ನಾವು ಕೂಡ ನಮ್ಮವರ ಜೊತೆಗೂಡಿ ಸ್ವಲ್ಪ ಸಮಯ ಕಳೆಯುವುದು, ಕಳೆದು ಹೋದ ಕ್ಷಣಗಳನ್ನು ನೆನೆದು ಎಲ್ಲರೊಟ್ಟಿಗೂಡಿ ಹರಟೆ ಹೊಡೆಯುವುದಕ್ಕಾಗಿ ಸ್ವಲ್ಪ ಸಮಯ ಮಾಡಿಕೊಳ್ಳೋಣ.



### ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು ?

೧. ದುಡಿಯುವದನ್ನೇ ಬದುಕನ್ನಾಗಿಸಿಕೊಂಡಿರುವ ನಾವು, ನಮ್ಮವರಿಗಾಗಿ ಸ್ವಲ್ಪ ಸಮಯವನ್ನು ಕಾಯ್ದಿರಿಸುವುದಿಲ್ಲವೇಕೆ?

೨. ನಮ್ಮ ಒಂದು ನಗು ನಮ್ಮವರ ನಡುವಿನ ಬಾಂಧವ್ಯವನ್ನು ಹೆಚ್ಚಿಸಬಹುದಲ್ಲವೇ?

೩. ನಮ್ಮಲ್ಲಿರುವ ನಗುವನ್ನು ದುಡ್ಡು ಕೊಟ್ಟು ಕೊಳ್ಳುವುದು ಎಷ್ಟು ಸರಿ?

೪. ಸಂಪಾದಿಸಿದ ಹಣವನ್ನು ಕಿತ್ತುಕೊಳ್ಳಬಹುದು, ನಮ್ಮಲ್ಲಿರುವ ಸಂತೋಷದ ಕ್ಷಣಗಳನ್ನು ಕಿತ್ತುಕೊಳ್ಳಲು ಸಾಧ್ಯವೇ?

೫. ಕೋಪದಿಂದ ಹೇಳುವ ಮಾತನ್ನು, ಒಂದು ಸಣ್ಣ ನಗುವಿನಿಂದ ಹೇಳಿದರೆ ಎಷ್ಟು ಚೆಂದಾ?

**ನಗಿ, ನಗಿಸಿ, ನಗುತ್ತಾ ಇರಿ.**

**ಗಂಗರಾಜು ಎಂ.**
ನಂ.೧೩, ಜಿ–ಬ್ಲಾಕ್, ಎನ್.ಜಿ.ಒ ಕ್ವಾರ್ಟಸ್,
ಡಾ॥ರಾಜ್‌ಕುಮಾರ್ ರಸ್ತೆ, ೬ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – ೫೬೦೦೧೦

## Statement of ownership particulars about "KARNATAKA VIKAS" FORM IV (See Rule 8)

| | | | |
|---|---|---|---|
| 1. | Place of Publication | : | Rural Development and Panchayath Raj Department, Bangalore - 560001. |
| 2. | Periodicity of Publication | : | Monthly |
| 3. | Printer's Name | : | M.Ravishankar |
| | Nationality | : | Indian |
| | Address | : | Director,<br>Department of Printing, Stationery & Publications Government Central Press, 8th Mile, R.V.College Post, Mysore Road, Bangalore 560059. |
| 4. | Publisher's Name | : | K.Yalakki Gowda |
| | Nationality | : | Indian |
| | Address | : | Publisher and Director (Panchayath Raj) No.309, 3rd Floor Gate No.1, Multistoreyed Building, Dr.Ambedkar Veedi, Bangalore 560001. |
| 5. | Editor's Name | : | Y.Mahankalappa |
| | Nationality | : | Indian |
| | Address | : | Editor, Karnataka Vikas, No.308, 3rd Floor, Gate No.1, Multistoreyed Building, Dr.Ambedkar Veedi, Bangalore 560001. |
| 6. | License No. | : | Regd. No. KA/BGGPO/2531/2015-17 |

***I K.Yalakki Gowda, hereby declare that the particulars given above are true to the best of my Knowledge and belief.***

Sd/-
**(K.Yalakki Gowda)**
Signature of the Publisher

Bangalore
Date: 01.03.2015

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 28-2-2015ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2013-14ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 207 | 100 | 100 | 50 | 43 | 96 | 100 | 96 | 83 | 1 |
| ರಾಮನಗರ | 130 | 100 | 100 | 0 | 91 | 96 | 99 | 71 | 79 | 2 |
| ಬೀದರ್ | 175 | 100 | 99 | 0 | 81 | 83 | 99 | 90 | 78 | 3 |
| ದಕ್ಷಿಣ ಕನ್ನಡ | 203 | 100 | 100 | 58 | 21 | 76 | 100 | 95 | 78 | 4 |
| ಬಾಗಲಕೋಟೆ | 161 | 100 | 100 | 4 | 68 | 97 | 99 | 70 | 76 | 5 |
| ಕೋಲಾರ | 156 | 100 | 100 | 0 | 96 | 89 | 85 | 60 | 75 | 6 |
| ಮೈಸೂರು | 235 | 100 | 100 | 1 | 71 | 89 | 99 | 66 | 75 | 7 |
| ಧಾರವಾಡ | 127 | 100 | 100 | 0 | 77 | 99 | 96 | 54 | 75 | 8 |
| ಉಡುಪಿ | 146 | 100 | 99 | 41 | 31 | 55 | 99 | 93 | 74 | 9 |
| ಗದಗ | 106 | 100 | 100 | 1 | 77 | 93 | 100 | 49 | 74 | 10 |
| ಚಿಕ್ಕಬಳ್ಳಾಪುರ | 151 | 100 | 100 | 1 | 79 | 90 | 85 | 65 | 74 | 11 |
| ಹಾವೇರಿ | 208 | 100 | 100 | 0 | 68 | 83 | 99 | 65 | 73 | 12 |
| ಚಾಮರಾಜನಗರ | 120 | 100 | 100 | 0 | 50 | 79 | 94 | 94 | 73 | 13 |
| ಮಂಡ್ಯ | 232 | 100 | 100 | 0 | 64 | 94 | 95 | 56 | 72 | 14 |
| ದಾವಣಗೆರೆ | 230 | 100 | 100 | 3 | 67 | 96 | 99 | 40 | 72 | 15 |
| ಬೆಂಗಳೂರು (ಗ್ರಾ) | 98 | 100 | 100 | 0 | 62 | 58 | 95 | 92 | 72 | 16 |
| ಶಿವಮೊಗ್ಗ | 260 | 100 | 100 | 6 | 38 | 86 | 99 | 70 | 71 | 17 |
| ಹಾಸನ | 258 | 100 | 100 | 3 | 57 | 63 | 99 | 76 | 71 | 18 |
| ಚಿತ್ರದುರ್ಗ | 185 | 100 | 100 | 0 | 76 | 83 | 96 | 36 | 70 | 19 |
| ಕೊಡಗು | 98 | 100 | 100 | 23 | 6 | 74 | 100 | 90 | 70 | 20 |
| ತುಮಕೂರು | 321 | 100 | 100 | 0 | 64 | 67 | 100 | 52 | 69 | 21 |
| ಚಿಕ್ಕಮಗಳೂರು | 226 | 100 | 100 | 19 | 20 | 57 | 99 | 77 | 67 | 22 |
| ವಿಜಯಪುರ | 199 | 100 | 100 | 1 | 51 | 54 | 98 | 58 | 66 | 23 |
| ಬೆಂಗಳೂರು (ನ) | 86 | 100 | 100 | 9 | 58 | 19 | 100 | 82 | 66 | 24 |
| ಬೆಳಗಾವಿ | 486 | 99 | 100 | 1 | 27 | 55 | 92 | 48 | 60 | 25 |
| ರಾಯಚೂರು | 165 | 99 | 100 | 3 | 37 | 47 | 87 | 49 | 60 | 26 |
| ಕಲಬುರಗಿ | 220 | 100 | 100 | 0 | 46 | 53 | 96 | 27 | 60 | 27 |
| ಕೊಪ್ಪಳ | 134 | 100 | 100 | 2 | 23 | 67 | 99 | 26 | 59 | 28 |
| ಬಳ್ಳಾರಿ | 189 | 100 | 100 | 2 | 15 | 58 | 93 | 37 | 57 | 29 |
| ಯಾದಗಿರಿ | 117 | 100 | 100 | 0 | 0 | 35 | 100 | 9 | 49 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಫೆಬ್ರವರಿ 2015)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಆ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಕೋಲಾರ | 19605 | 20061 | 0.1 | 3 | 1307 | 2 | 1 |
| ಚಿಕ್ಕಬಳ್ಳಾಪುರ | 11584 | 11870 | 0 | 1 | 965 | 4 | 2 |
| ಗದಗ | 11107 | 11470 | 0.2 | 5 | 1110 | 3 | 3 |
| ಬೀದರ್ | 60045 | 61940 | 2.2 | 17 | 3532 | 1 | 4 |
| ತುಮಕೂರು | 14770 | 14603 | 0.7 | 9 | 568 | 6 | 5 |
| ಹಾವೇರಿ | 7977 | 7968 | 0.5 | 7 | 531 | 7 | 6 |
| ಬೆಂಗಳೂರು ಗ್ರಾಮಾಂತರ | 8636 | 8604 | 2 | 16 | 959 | 5 | 7 |
| ಚಿತ್ರದುರ್ಗ | 6621 | 6597 | 2.6 | 19 | 413 | 8 | 8 |
| ಬಾಗಲಕೋಟೆ | 5867 | 5374 | 1 | 12 | 325 | 11 | 9 |
| ಶಿವಮೊಗ್ಗ | 4265 | 4467 | 0.2 | 5 | 250 | 14 | 10 |
| ರಾಯಚೂರು | 7223 | 7237 | 2.5 | 18 | 380 | 9 | 11 |
| ರಾಮನಗರ | 2786 | 2643 | 0.9 | 10 | 278 | 13 | 12 |
| ಉತ್ತರ ಕನ್ನಡ | 2465 | 2173 | 0 | 1 | 176 | 18 | 13 |
| ಚಾಮರಾಜನಗರ | 2460 | 2575 | 1 | 12 | 246 | 15 | 14 |
| ಚಿಕ್ಕಮಗಳೂರು | 3745 | 3652 | 4.5 | 24 | 340 | 10 | 15 |
| ಬೆಳಗಾವಿ | 9813 | 10241 | 0.9 | 10 | 208 | 17 | 16 |
| ವಿಜಯಪುರ | 6568 | 6517 | 4.2 | 23 | 312 | 12 | 17 |
| ಮೈಸೂರು | 3922 | 4136 | 0.1 | 3 | 135 | 23 | 18 |
| ಹಾಸನ | 3887 | 4232 | 2.9 | 20 | 228 | 16 | 19 |
| ಕೊಡಗು | 796 | 848 | 1.5 | 15 | 159 | 20 | 20 |
| ಮಂಡ್ಯ | 2678 | 2943 | 1.2 | 14 | 148 | 22 | 21 |
| ದಕ್ಷಿಣ ಕನ್ನಡ | 1325 | 2225 | 0.5 | 7 | 66 | 26 | 22 |
| ಉಡುಪಿ | 1834 | 1982 | 6.7 | 28 | 166 | 19 | 23 |
| ಧಾರವಾಡ | 2694 | 3248 | 7.9 | 29 | 149 | 21 | 24 |
| ದಾವಣಗೆರೆ | 2167 | 1945 | 3.6 | 22 | 114 | 24 | 25 |
| ಕೊಪ್ಪಳ | 1204 | 1122 | 5.1 | 25 | 92 | 25 | 26 |
| ಬಳ್ಳಾರಿ | 1299 | 1301 | 3 | 21 | 51 | 27 | 27 |
| ಕಲಬುರಗಿ | 1229 | 1232 | 6 | 26 | 49 | 28 | 28 |
| ಯಾದಗಿರಿ | 383 | 370 | 6.2 | 27 | 34 | 29 | 29 |
| ಬೆಂಗಳೂರು(ನ) | 3195 | 4732 | 16.3 | 30 | 33 | 30 | 30 |

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಗ್ರಾಅಪ/47/ಗ.ಕೋಶ/2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:22.01.2015

# ಸುತ್ತೋಲೆ

**ವಿಷಯ :** ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ Photo auditing module ನ್ನು ಅಳವಡಿಸಿರುವ ಬಗ್ಗೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಿರುವ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಛಾಯಾಚಿತ್ರ ಮತ್ತು ದಾಖಲೆಗಳನ್ನು ಕಡ್ಡಾಯವಾಗಿ ಅಳವಡಿಸಬೇಕಾಗಿದ್ದು, ಹಲವು ಕಾಮಗಾರಿಗಳಿಗೆ ಸರಿಯಾದ ಛಾಯಾಚಿತ್ರ ಮತ್ತು ದಾಖಲೆಗಳನ್ನು ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನಲೆಯಲ್ಲಿ ಸರಿಯಾದ ಛಾಯಾಚಿತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ತಂಡವನ್ನು ರಚಿಸಲು ಈಗಾಗಲೇ ಆದೇಶಿಸಲಾಗಿತ್ತು. ಈ ಬಗ್ಗೆ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ Photo auditing ಗಾಗಿ module ನ್ನು ಅಭಿವೃದ್ಧಿಪಡಿಸಿದ್ದು, ಸದರಿ module ದಿನಾಂಕ:21.01.2015 ರಿಂದ ಜಾರಿಗೆ ಬಂದಿರುತ್ತದೆ.

Photo auditing ತಂಡದವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಲಾಗಿನ್ ಆದಾಗ ಛಾಯಾಚಿತ್ರ ಮತ್ತು ದಾಖಲೆಗಳ ಪರಿಶೀಲನೆಗಾಗಿ ಬಂದಿರುವ ಕಾಮಗಾರಿಗಳ ಪಟ್ಟಿ ಕಾಣಿಸುತ್ತದೆ. ಛಾಯಾಚಿತ್ರ ಮತ್ತು ದಾಖಲೆಗಳನ್ನು ಸದರಿ ತಂಡದವರು ಪರಿಶೀಲನೆ ಮಾಡಿ ಅನುಮೋದಿಸಿದಾಗಲೇ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಬಳಕೆದಾರರು ಪಾವತಿ ಆದೇಶ ಮತ್ತು ಬಿಲ್ಲುಗಳನ್ನು ಸೃಜನೆ ಮಾಡಲು ಈ ಕೆಳಗಿನಂತೆ ಅವಕಾಶ ಕಲ್ಪಿಸಿಕೊಡಲಾಗಿದೆ (ಮಾದರಿ ಪ್ರತಿ ಲಗತ್ತಿಸಿದೆ).

- ಆಡಿಟ್ ತಂಡದ ಲಾಗಿನ್‌ನಲ್ಲಿ ಆಡಿಟ್‌ಗಾಗಿ ಬಂದಿರುವ ಕಾಮಗಾರಿಗಳನ್ನು ಪರಿಶೀಲನೆ ಮಾಡಬೇಕಾದರೆ ಪ್ರತ್ಯೇಕ ಕಾಮಗಾರಿಗೆ ಸಂಬಂಧಪಟ್ಟ ಗೂಗಲ್ ಮ್ಯಾಪ್, ಆರಂಭಿಕ ಫೋಟೋ, ಅಂತಿಮ ಹಂತದ ಫೋಟೋಗಳು, ಕಾಮಗಾರಿ ಅಳತೆ ಪುಸ್ತಕದ ಪ್ರತಿ ಮತ್ತು ಬಿಲ್ಲು ಪ್ರತಿಗಳು ಒಂದೇ ಪರದೆಯ ಮೇಲೆ ಕಾಣಿಸುತ್ತದೆ.

- ತಂಡದವರು ಇವೆಲ್ಲವನ್ನು ಸರಿ ಇದೆ ಎಂದು ಅನುಮೋದಿಸಿದಾಗ ಮಾತ್ರ ಪಾವತಿ ಆದೇಶ ಮತ್ತು ಬಿಲ್ಲುಗಳನ್ನು ಸೃಜನೆ ಮಾಡಬಹುದಾಗಿದೆ.

- ಅಪ್‌ಲೋಡ್ ಮಾಡಿದ ಛಾಯಾಚಿತ್ರ ಮತ್ತು ದಾಖಲೆಗಳು ಸರಿ ಇಲ್ಲವೆಂದು ಕಂಡುಬಂದಲ್ಲಿ ಆಡಿಟ್ ತಂಡದವರು ಕಾಮಗಾರಿಯನ್ನು ತಿರಸ್ಕರಿಸಬಹುದಾಗಿದೆ.

- ತಿರಸ್ಕರಿಸಿದ ಕಾಮಗಾರಿಗಳು ಗಾಂಧಿ ಸಾಕ್ಷಿ ಕಾಯಕ ಬಳಕೆದಾರರ ಲಾಗಿನ್‌ಗೆ ಹಿಂತಿರುಗುತ್ತದೆ.

- ಮತ್ತೊಮ್ಮೆ ಹೊಸದಾಗಿ ಮತ್ತು ಸರಿಯಾದ ಛಾಯಾಚಿತ್ರ ಮತ್ತು ದಾಖಲೆ ಆರೋಹಿಸಿದಾಗ ಮರು ಪರೀಕ್ಷಿಸಲು ಪುನಃ ಆಡಿಟ್ ಟೀಮ್ ಲಾಗಿನ್‌ಗೆ ಬರುತ್ತದೆ.

- ಆಡಿಟ್ ಟೀಮ್ ಅನುಮೋದಿಸದೇ ಇದ್ದಲ್ಲಿ ಪಾವತಿ ಆದೇಶ ಮತ್ತು ಬಿಲ್ಲುಗಳನ್ನು ಸೃಜನೆ ಮಾಡಲು ಆಗುವುದಿಲ್ಲ.

ಜಿಲ್ಲಾ ಪಂಚಾಯತ್‌ಗಳಲ್ಲಿ ಛಾಯಾಚಿತ್ರ ಮತ್ತು ದಾಖಲೆಗಳನ್ನು ಪರಿಶೀಲನೆಗಾಗಿ ರಚಿಸಿರುವ ತಂಡದವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ನೀರು ಸರಬರಾಜು ಇಲಾಖೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟ ಕಾಮಗಾರಿಗಳನ್ನು ತಮ್ಮ ಜಿಲ್ಲಾ ಪಂಚಾಯತ್‌ನ ಗಾಂಧಿ ಸಾಕ್ಷಿ ಕಾಯಕ

ಲಾಗಿನ್‌ನಲ್ಲಿ ಆಡಿಟ್ ಮಾಡಲು ಅವಕಾಶ ಕಲ್ಪಿಸಿದೆ. ಹಾಗೆಯೇ ಕೆಆರ್‌ಐಡಿಎಲ್ ಮತ್ತು ಕೆಆರ್‌ಆರ್‌ಡಿಎಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಯ ಪ್ರಧಾನ ಕಾರ್ಯಾಲಯ, ಬೆಂಗಳೂರು ಇವರ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಿದೆ.

ಮೇಲಿನಂತೆ ಸೂಕ್ತ ವ್ಯವಸ್ಥೆ ಮಾಡಲು ಹಾಗೂ ತಂತ್ರಾಂಶದ ಕ್ರಮಬದ್ಧ ಮತ್ತು ಶಿಸ್ತುಬದ್ಧ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ.

**(ಟಿ.ಎಂ. ವಿಜಯ ಭಾಸ್ಕರ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# National Informatics Centre, Bangalore


## System Auditing of GSK Works

As per the department's directions, NIC has designed and developed the software in the Gandhi Sakshi Kayaka to audit the photos and other documents by the Auditing Teams setup at the ZP for PRED, RWS and TP works and KRIDL Hqrs for KRIDL works and KRRDA Hqrs for KRRDA works.

Once these teams login into the GSK, the system will give the list of works pending for auditing of the photos and documents. The works which have been entered with the bills and waiting for the payment advice generation will be listed herewith. Once the audit team sees and clears it, then the payment advice can be generated. The audit team will be displayed in one screen to see the location in google map, initial photos, final photos, Measurement Book copies and Bill copy. If the audit team rejects it, it will come back to the concerned office to upload the fresh and correct photos and documents. After that it will come back to the Audit team for re-check. It the audit team clears the photos and documents, the payment advice cannot be generated. The copies of the screen shots of the software have been enclosed herewith.

## SCREEN SHOTS FOR PHOTO AUDIT by AUDIT TEAM


1) Screen to select the office/taluk to get the list of works for photo auditing. Default ALL is available.




2. Screen showing list of works with bill entries and waiting for payment advice for selected office.





3 Screen showing the work details, location of the work on google map, initial photos, final photos, Measurement Book copies and Bill copy. Audit team can say OK or NOT OK for each of the item show here and press 'SAVE AND NEXT' to see the next work.




4.  Screen showing the zoom of  the photo





5  Screen showing one more work




6 Screen showing one more work.





7. Screen showing zoom of the MB copy




8. Screen showing one more work.





8. Screen showing the zoom of the photo




Screen Showing Rejected Work List in Concerned Login





Screen for Uploading Fresh Photo & Documents for rejected Works in Concerned Login








Screen Showing Rejected Work List




Screen for Uploading Fresh Photo & Documents for rejected Works



Screen Showing has rejected the photo &Document uploaded for this work.







| SLNO | Implementing Agency | Taluk Name | Scheme Name | Work ID | Work Name | Status | |
|---|---|---|---|---|---|---|---|
| 1 | PRED | SULYA | ROAD Works in Rural Areas - RIDF NABARD WORKS | 120029 | ಸುಳ್ಯ ತಾಲೂಕು [illegible] ರಸ್ತೆ ಅಭಿವೃದ್ಧಿ | ಮಾಪನ ಹಂತದಲ್ಲಿರುವ | Click here to View |
| 2 | PRED | BANTVAL | Annual maintenance and repairs | 120644 | ವಿಟ್ಲ ಗ್ರಾಮದ [illegible] ಕೆರೆ ಅಭಿವೃದ್ಧಿ | ಮಾಪನ ಹಂತದಲ್ಲಿರುವ | Click here to View |
| 3 | PRED | MANGALURU | 13th Finance Grants - Maintenance of Roads and Bridges | 120748 | ಮಂಗಳೂರು ತಾಲೂಕು [illegible] ಪಂಚಾಯತ್ [illegible] ರಸ್ತೆ ನಿರ್ವಹಣೆ. | ಮಾಪನ ಹಂತದಲ್ಲಿರುವ | Click here to View |
| 4 | PRED | MANGALURU | 13th Finance Grants - Maintenance of Roads and Bridges | 120820 | ಮಂಗಳೂರು ತಾಲೂಕು ಕಂದಾವರ ಗ್ರಾಮ ಪಂಚಾಯತ್ ಜೆ.ಆರ್ ಲೋಬೊ ರಸ್ತೆ ನಿರ್ವಹಣೆ. | ಮಾಪನ ಹಂತದಲ್ಲಿರುವ | Click here to View |
| 5 | PRED | MANGALURU | 13th Finance Grants - Maintenance of Roads and Bridges | 120834 | ಮಂಗಳೂರು ತಾಲೂಕು ಗ್ರಾಮ ಪಂಚಾಯತ್ ವ್ಯಾಪ್ತಿಯ [illegible] ರಸ್ತೆ ನಿರ್ವಹಣೆ | ಮಾಪನ ಹಂತದಲ್ಲಿರುವ | Click here to View |
| 6 | PRED | MANGALURU | 13th Finance Grants - Maintenance of Roads and Bridges | 120843 | ಮಂಗಳೂರು ತಾಲೂಕು [illegible] ಗ್ರಾಮ ಪಂಚಾಯತ್ ನ [illegible] ರಸ್ತೆ ಅಭಿವೃದ್ಧಿ | ಮಾಪನ ಹಂತದಲ್ಲಿರುವ | Click here to View |
| 7 | PRED | MANGALURU | 13th Finance Grants - Maintenance of Roads and Bridges | 120856 | ಮಂಗಳೂರು ತಾಲೂಕು [illegible] ಗ್ರಾಮ ಪಂಚಾಯತ್ ವ್ಯಾಪ್ತಿಯ [illegible] ರಸ್ತೆ ಡಾಮರೀಕರಣ | ಮಾಪನ ಹಂತದಲ್ಲಿರುವ | Click here to View |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ ಎಲ್ಲಾ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು

ಪ್ರಸ್ತಾವನೆ:

ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2014–15ನೇ ಸಾಲಿನಲ್ಲಿ "ಗ್ರಾಮ ವಿಕಾಸ" ಎಂಬ ಯೋಜನೆಯನ್ನು ರಾಜ್ಯದ 189 ಗ್ರಾಮೀಣ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ. ಅದರಂತೆ "ಗ್ರಾಮ ವಿಕಾಸ" ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮ ಸೇರಿ ಒಟ್ಟು 5 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೊಳಿಸಲು 3 ವರ್ಷದ ಯೋಜನೆ ತೆಗೆದುಕೊಳ್ಳಲಾಗುವುದೆಂದು 2014–15ರ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿರುತ್ತದೆ.

ಅದಕ್ಕಾಗಿ 2011ರ ಜನಸಂಖ್ಯೆಯನ್ನು ಆಧರಿಸಿ ಆಯ್ಕೆಯಾಗುವ ಪ್ರತಿ ಗ್ರಾಮದ ಜನಸಂಖ್ಯೆ ಸುಮಾರು 1000 ಇರುವಂತೆಯೂ ಮತ್ತು ಆಯ್ಕೆಯಾಗುವ ಗ್ರಾಮದ ಅಭಿವೃದ್ಧಿಗೆ ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮಕ್ಕೆ ರೂ.0.75 ಕೋಟಿ ಅನುದಾನ ದೊರಕುವಂತೆ ಮತ್ತು ಪ್ರತಿ ಗ್ರಾಮೀಣ ಮತಕ್ಷೇತ್ರಕ್ಕೆ ಒಟ್ಟು ಗರಿಷ್ಠ 5 ಸಾವಿರ ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಠ ರೂ.3.75 ಕೋಟಿಗಳು ಹಂಚಿಕೆ ಮಾಡಬಹುದಾಗಿದೆ.

ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆ ಮಾಡಬಹುದಾದ ಗ್ರಾಮಗಳ ಸಂಖ್ಯೆ, ನಿಗಧಿಪಡಿಸಬಹುದಾದ ಅನುದಾನಗಳನ್ನು ಅನುಬಂಧ–1 ರಲ್ಲಿರುವಂತೆ ಹಾಗೂ ಒಂದು ಗ್ರಾಮೀಣ ಮತಕ್ಷೇತ್ರವು ಎರಡು ತಾಲ್ಲೂಕುಗಳನ್ನು ಹೊಂದಿರುವ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ಗ್ರಾಮಗಳ ಸಂಖ್ಯೆ ಹಾಗೂ ಅನುದಾನವನ್ನು ಅನುಬಂಧ–2 ರಲ್ಲಿರುವಂತೆ ನಿಗಧಿ ಮಾಡಲು ಅವಕಾಶ ಕಲ್ಪಿಸಿರುತ್ತದೆ.

ಇದಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲೆಗಳ 189 ಗ್ರಾಮೀಣ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 1000 ಗ್ರಾಮಗಳನ್ನು ರೂ.750.00 ಕೋಟಿಗಳ ಅಂದಾಜಿನಲ್ಲಿ ಗ್ರಾಮ ವಿಕಾಸ ಯೋಜನೆಯ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಅನುಷ್ಠಾನ ಮಾಡಲು ಪ್ರಸ್ತಾಪಿಸಿದೆ. ಗ್ರಾಮ ವಿಕಾಸ ಯೋಜನೆಯ ಉದ್ದೇಶ, ಗ್ರಾಮಗಳ ಆಯ್ಕೆ, ಕೈಗೊಳ್ಳುವ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಾರ್ಯಾನುಷ್ಠಾನದ ಕ್ರಮಗಳು ಮಾರ್ಗಸೂಚಿ ಮತ್ತು ಸರ್ಕಾರಿ ಸುತ್ತೋಲೆಗಳಲ್ಲಿ ತಿಳಿಸಿದಂತೆ ಇರುತ್ತದೆ. ರಾಜ್ಯಾದ್ಯಂತ ಗ್ರಾಮ ವಿಕಾಸ ಯೋಜನೆಯನ್ನು ಜಾರಿಗೆ ತರುವ ಹಿನ್ನೆಲೆಯ ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:50:ಸುಗ್ರಾಯೋ:2014,ಬೆಂಗಳೂರು, ದಿನಾಂಕ: 20 ಅಕ್ಟೋಬರ್ 2014**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ "ಗ್ರಾಮ ವಿಕಾಸ" ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 1000 ಗ್ರಾಮಗಳಲ್ಲಿ ಅಂದಾಜು ವೆಚ್ಚ ರೂ.750.00 ಕೋಟಿಗಳನ್ನು ಮೂರು ವರ್ಷಗಳಲ್ಲಿ ಭರಿಸಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು

ತಲಾನುದಾನ ರೂ.7,500/– ರಂತೆ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮಗಳು ಸೇರಿ) ಅನುಬಂಧ 1 ಹಾಗೂ ಅನುಬಂಧ–2 ರಲ್ಲಿ ನಿಗಧಿಪಡಿಸಿದ ರೀತಿಯಲ್ಲಿ ಆಯ್ಕೆಯಾದ ಗರಿಷ್ಠ 5 ಗ್ರಾಮಗಳನ್ನು ಅಭಿವೃದ್ಧಿಪಡಿಸಲು.

ಗ್ರಾಮ ವಿಕಾಸ ಯೋಜನೆಯಡಿ ಸರ್ಕಾರವು ಅನುಮೋದನೆ ನೀಡಿದ ಗ್ರಾಮಗಳಲ್ಲಿ ಗ್ರಾಮಗಳ ಅಭಿವೃದ್ಧಿ ಮಾಡುವ ಅನುಷ್ಠಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲು ಮಂಜೂರಾತಿ ನೀಡಿದೆ. ಗ್ರಾಮ ಪಂಚಾಯಿತಿಯು ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ಅನುಮೋದಿಸುವ ಮಾರ್ಗಸೂಚಿಯಲ್ಲಿರುವಂತೆ ಅನುಷ್ಠಾನ ಮಾಡಲು ಮಂಜೂರಾತಿ ನೀಡಿದೆ.


ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಒದಗಿಸುವ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಮಾತ್ರ ಕಡ್ಡಾಯವಾಗಿ ಕೈಗೊಳ್ಳುವುದು ಮತ್ತು ಈ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ.

ಗ್ರಾಮ ವಿಕಾಸ ಯೋಜನೆಯ ವೆಚ್ಚವನ್ನು ಈ ಕೆಳಕಂಡ ಲೆ.ಶೀ.ಗಳಡಿಯಲ್ಲಿಯೇ ಭರಿಸುವುದು.

1. 4215–02–800–0–02–132 (ಯೋಜನೆ)– ಬಂಡವಾಳ ವೆಚ್ಚಗಳು
2. 4215–02–800–0–02–422 (ಯೋಜನೆ)– ವಿಶೇಷ ಘಟಕ ಯೋಜನೆ
3. 4215–02–800–0–02–423 (ಯೋಜನೆ)– ಗಿರಿಜನ ಉಪ ಯೋಜನೆ

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ:33:ಜಿಯೋವಿ:2014 ದಿನಾಂಕ 05–05–2014 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/419ವೆಚ್ಚ–6/2013 ದಿನಾಂಕ 14–07–2014ರಲ್ಲಿ ನೀಡಿದ ಸಹಮತಿಗಳನ್ನಾಧರಿಸಿ ಸಚಿವ ಸಂಪುಟವು ಸಂಖ್ಯೆ:ಸಿ:525:2014 ದಿನಾಂಕ 26–09–2014ರಲ್ಲಿ ನೀಡಿದ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ



(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ & ಪಘಅಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ-1

## 2014-15ನೇ ಸಾಲಿನಿಂದ ಆರಂಭವಾಗುವ ಗ್ರಾಮ ವಿಕಾಸ ಯೋಜನೆಗೆ ಗ್ರಾಮೀಣ ಮತಕ್ಷೇತ್ರವಾರು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ

| ಕ್ರ. ಸಂ. | ಜಿಲ್ಲೆಗಳ ಹೆಸರು | ಗ್ರಾಮೀಣ ವಿಧಾನಸಭಾ ಕ್ಷೇತ್ರದ ಹೆಸರು | | ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಗರಿಷ್ಠ 5000 ಜನಸಂಖ್ಯೆಯನ್ನು ಮಿತಿಗೊಳಿಸಿ ಹಂಚಿಕೆ ಮಾಡಬಹುದಾದ ಸಂಭವನೀಯ ಗರಿಷ್ಠ ಗ್ರಾಮಗಳ ಸಂಖ್ಯೆ | ತಲಾನುದಾನ ರೂ.7500/- ರಂತೆ ಗರಿಷ್ಠ 5000 ಜನಸಂಖ್ಯೆಯ ಮಿತಿಯುಳ್ಳ ಒಟ್ಟು ಗ್ರಾಮಗಳಿಗೆ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಅನುದಾನ (ರೂ.ಕೋಟಿಗಳು) |
|---|---|---|---|---|---|
| 1 | ಬೆಳಗಾವಿ | 1 | ನಿಪ್ಪಾಣಿ | 5 | 3.75 |
| | | 2 | ಚಿಕ್ಕೋಡಿ-ಸದಲಗ | 5 | 3.75 |
| | | 3 | ಅಥಣಿ | 5 | 3.75 |
| | | 4 | ಕಾಗವಾಡ | 5 | 3.75 |
| | | 5 | ಕುಡಚಿ (ಪ.ಜಾ) | 5 | 3.75 |
| | | 6 | ರಾಯಭಾಗ (ಪ.ಜಾ) | 5 | 3.75 |
| | | 7 | ಹುಕ್ಕೇರಿ | 5 | 3.75 |
| | | 8 | ಅರಬಾವಿ | 5 | 3.75 |
| | | 9 | ಗೋಕಾಕ್ | 5 | 3.75 |
| | | 10 | ಯಮಕನಮರಡಿ (ಪ.ಪಂ.) | 5 | 3.75 |
| | | 11 | ಬೆಳಗಾವಿ ದಕ್ಷಿಣ | 5 | 3.75 |
| | | 12 | ಬೆಳಗಾವಿ ಗ್ರಾಮಾಂತರ | 5 | 3.75 |
| | | 13 | ಖಾನಾಪುರ | 5 | 3.75 |
| | | 14 | ಕಿತ್ತೂರು | 5 | 3.75 |
| | | 15 | ಬೈಲಹೊಂಗಲ | 5 | 3.75 |
| | | 16 | ಸೌಂದತ್ತಿ ಯಲ್ಲಮ್ಮ | 5 | 3.75 |
| | | 17 | ರಾಮದುರ್ಗ | 5 | 3.75 |
| 2 | ಬಾಗಲಕೋಟೆ | 18 | ಮುಧೋಳ (ಪ.ಜಾ) | 5 | 3.75 |
| | | 19 | ತೇರದಾಳ | 5 | 3.75 |
| | | 20 | ಜಮಖಂಡಿ | 5 | 3.75 |
| | | 21 | ಬೀಳಗಿ | 5 | 3.75 |
| | | 22 | ಬಾದಾಮಿ | 5 | 3.75 |
| | | 23 | ಬಾಗಲಕೋಟೆ | 5 | 3.75 |
| | | 24 | ಹುನಗುಂದ | 5 | 3.75 |
| 3 | ಬಿಜಾಪುರ | 25 | ಮುದ್ದೇಬಿಹಾಳ | 5 | 3.75 |
| | | 26 | ದೇವರ ಹಿಪ್ಪರಗಿ | 5 | 3.75 |
| | | 27 | ಬ.ಬಾಗೇವಾಡಿ | 5 | 3.75 |
| | | 28 | ಬಬಲೇಶ್ವರ | 5 | 3.75 |
| | | 29 | ಬಿಜಾಪುರ ನಗರ | 5 | 3.75 |
| | | 30 | ನಾಗಠಾಣ (ಪ.ಜಾ) | 5 | 3.75 |
| | | 31 | ಇಂಡಿ | 5 | 3.75 |
| | | 32 | ಸಿಂಧಗಿ | 5 | 3.75 |
| 4 | ಗುಲಬರ್ಗಾ | 33 | ಅಫಜಲಪುರ | 5 | 3.75 |
| | | 34 | ಜೇವರ್ಗಿ | 5 | 3.75 |
| | | 35 | ಚಿತ್ತಾಪೂರ (ಪ.ಜಾ) | 5 | 3.75 |
| | | 36 | ಸೇಡಂ | 5 | 3.75 |
| | | 37 | ಚಿಂಚೋಳಿ (ಪ.ಜಾ) | 5 | 3.75 |
| | | 38 | ಗುಲ್ಬರ್ಗಾ-ಗ್ರಾ (ಪ.ಜಾ) | 5 | 3.75 |
| | | 39 | ಗುಲ್ಬರ್ಗಾ ದಕ್ಷಿಣ | 5 | 3.75 |
| | | 40 | ಆಳಂದ | 5 | 3.75 |
| 5 | ಬೀದರ್ | 41 | ಬಸವಕಲ್ಯಾಣ | 5 | 3.75 |
| | | 42 | ಹುಮನಾಬಾದ | 5 | 3.75 |
| | | 43 | ಬೀದರ್ ದಕ್ಷಿಣ | 5 | 3.75 |
| | | 44 | ಬೀದರ್ | 5 | 3.75 |
| | | 45 | ಬಾಲ್ಕಿ | 5 | 3.75 |
| | | 46 | ಔರಾದ್ (ಪ.ಜಾ) | 5 | 3.75 |
| 6 | ರಾಯಚೂರು | 47 | ರಾಯಚೂರು-ಗ್ರಾ (ಪ.ಪಂ.) | 5 | 3.75 |
| | | 48 | ಮಾನ್ವಿ (ಪ.ಪಂ.) | 5 | 3.75 |
| | | 49 | ದೇವದುರ್ಗ (ಪ.ಪಂ.) | 5 | 3.75 |
| | | 50 | ಲಿಂಗಸಗೂರ (ಪ.ಜಾ) | 5 | 3.75 |
| | | 51 | ಸಿಂಧನೂರು | 5 | 3.75 |
| | | 52 | ಮಸ್ಕಿ (ಪಾ.ಪಂ) | 5 | 3.75 |
| 7 | ಕೊಪ್ಪಳ | 53 | ಕುಷ್ಟಗಿ | 5 | 3.75 |
| | | 54 | ಕನಕಗಿರಿ (ಪ.ಜಾ) | 5 | 3.75 |
| | | 55 | ಗಂಗಾವತಿ | 5 | 3.75 |
| | | 56 | ಯಲಬುರ್ಗಾ | 5 | 3.75 |
| | | 57 | ಕೊಪ್ಪಳ | 5 | 3.75 |
| 8 | ಗದಗ | 58 | ಶಿರಹಟ್ಟಿ (ಪ.ಜಾ) | 5 | 3.75 |
| | | 59 | ಗದಗ | 5 | 3.75 |
| | | 60 | ರೋಣ | 5 | 3.75 |
| | | 61 | ನರಗುಂದ | 5 | 3.75 |
| 9 | ಧಾರವಾಡ | 62 | ನವಲಗುಂದ | 5 | 3.75 |
| | | 63 | ಕುಂದಗೋಳ | 5 | 3.75 |
| | | 64 | ಧಾರವಾಡ | 5 | 3.75 |
| | | 65 | ಕಲಘಟಗಿ | 5 | 3.75 |
| 10 | ಉತ್ತರ ಕನ್ನಡ | 66 | ಕುಮಟ | 5 | 3.75 |
| | | 67 | ಭಟ್ಕಳ | 5 | 3.75 |
| | | 68 | ಶಿರಸಿ | 5 | 3.75 |
| 11 | ಹಾವೇರಿ | 69 | ಹಾನಗಲ್ | 5 | 3.75 |
| | | 70 | ಶಿಗ್ಗಾಂವ್ | 5 | 3.75 |
| | | 71 | ಹಾವೇರಿ (ಪ.ಜಾ) | 5 | 3.75 |
| | | 72 | ಬ್ಯಾಡಗಿ | 5 | 3.75 |
| | | 73 | ಹಿರೇಕೆರೂರು | 5 | 3.75 |
| | | 74 | ರಾಣೇಬೆನ್ನೂರು | 5 | 3.75 |
| 12 | ಬಳ್ಳಾರಿ | 75 | ಹಡಗಲಿ (ಪ.ಜಾ) | 5 | 3.75 |
| | | 76 | ಹ.ಬೊಮ್ಮನಹಳ್ಳಿ (ಪ.ಜಾ) | 5 | 3.75 |
| | | 77 | ವಿಜಯನಗರ | 5 | 3.75 |
| | | 78 | ಕಂಪ್ಲಿ (ಪ.ಪಂ) | 5 | 3.75 |
| | | 79 | ಸಿರಗುಪ್ಪ (ಪ.ಪಂ) | 5 | 3.75 |
| | | 80 | ಬಳ್ಳಾರಿ (ಪ.ಪಂ) | 5 | 3.75 |
| | | 81 | ಸಂಡೂರು (ಪ.ಪಂ) | 5 | 3.75 |
| | | 82 | ಕೂಡ್ಲಿಗಿ (ಪ.ಪಂ) | 5 | 3.75 |

| | | | | | |
|---|---|---|---|---|---|
| 13 | ಚಿತ್ರದುರ್ಗ | 83 | ಮೊಳಕಾಲ್ಮೂರು (ಪ.ಪಂ) | 5 | 3.75 |
| | | 84 | ಚಳ್ಳಕೆರೆ (ಪ.ಪಂ) | 5 | 3.75 |
| | | 85 | ಚಿತ್ರದುರ್ಗ | 5 | 3.75 |
| | | 86 | ಹಿರಿಯೂರು | 5 | 3.75 |
| | | 87 | ಹೊಸದುರ್ಗ | 5 | 3.75 |
| | | 88 | ಹೊಳಲ್ಕೆರೆ (ಪ.ಜಾ) | 5 | 3.75 |
| 14 | ದಾವಣಗೆರೆ | 89 | ಜಗಳೂರು (ಪ.ಪಂ) | 5 | 3.75 |
| | | 90 | ಹರಪನಹಳ್ಳಿ | 5 | 3.75 |
| | | 91 | ಹರಿಹರ | 5 | 3.75 |
| | | 92 | ದಾವಣಗೆರೆ ಉತ್ತರ | 5 | 3.75 |
| | | 93 | ದಾವಣಗೆರೆ ದಕ್ಷಿಣ | 5 | 3.75 |
| | | 94 | ಮಾಯಕೊಂಡ (ಪ.ಜಾ) | 5 | 3.75 |
| | | 95 | ಚನ್ನಗಿರಿ | 5 | 3.75 |
| | | 96 | ಹೊನ್ನಾಳಿ | 5 | 3.75 |
| 15 | ಶಿವಮೊಗ್ಗ | 97 | ಶಿವಮೊಗ್ಗ-ಗ್ರಾ (ಪ.ಜಾ) | 5 | 3.75 |
| | | 98 | ಭದ್ರಾವತಿ | 5 | 3.75 |
| | | 99 | ತೀರ್ಥಹಳ್ಳಿ | 5 | 3.75 |
| | | 100 | ಶಿಕಾರಿಪುರ | 5 | 3.75 |
| | | 101 | ಸೊರಬ | 5 | 3.75 |
| | | 102 | ಸಾಗರ | 5 | 3.75 |
| 16 | ಉಡುಪಿ | 103 | ಬೈಂದೂರು | 5 | 3.75 |
| | | 104 | ಕುಂದಾಪುರ | 5 | 3.75 |
| | | 105 | ಉಡುಪಿ | 5 | 3.75 |
| | | 106 | ಕಾಪು | 5 | 3.75 |
| | | 107 | ಕಾರ್ಕಳ | 5 | 3.75 |
| 17 | ಚಿಕ್ಕಮಗಳೂರು | 108 | ಮೂಡಿಗೆರೆ (ಪ.ಜಾ) | 5 | 3.75 |
| | | 109 | ಚಿಕ್ಕಮಗಳೂರು | 5 | 3.75 |
| | | 110 | ತರೀಕೆರೆ | 5 | 3.75 |
| | | 111 | ಕಡೂರು | 5 | 3.75 |
| 18 | ತುಮಕೂರು | 112 | ಚಿಕ್ಕನಾಯಕನಹಳ್ಳಿ | 5 | 3.75 |
| | | 113 | ತಿಪಟೂರು | 5 | 3.75 |
| | | 114 | ತುರುವೇಕೆರೆ | 5 | 3.75 |
| | | 115 | ಕುಣಿಗಲ್ | 5 | 3.75 |
| | | 116 | ತುಮಕೂರು ಗ್ರಾಮಾಂತರ | 5 | 3.75 |
| | | 117 | ಕೊರಟಗೆರೆ (ಪ.ಜಾ) | 5 | 3.75 |
| | | 118 | ಗುಬ್ಬಿ | 5 | 3.75 |
| | | 119 | ಶಿರಾ | 5 | 3.75 |
| | | 120 | ಪಾವಗಡ (ಪ.ಜಾ) | 5 | 3.75 |
| | | 121 | ಮಧುಗಿರಿ | 5 | 3.75 |
| 19 | ಚಿಕ್ಕಬಳ್ಳಾಪುರ | 122 | ಗೌರಿಬಿದನೂರು | 5 | 3.75 |
| | | 123 | ಚಿಕ್ಕಬಳ್ಳಾಪುರ | 5 | 3.75 |
| | | 124 | ಶಿಡ್ಲಘಟ್ಟ | 5 | 3.75 |
| | | 125 | ಚಿಂತಾಮಣಿ | 5 | 3.75 |
| 20 | ಕೋಲಾರ | 126 | ಶ್ರೀನಿವಾಸಪುರ | 5 | 3.75 |
| | | 127 | ಮುಳಬಾಗಿಲು (ಪ.ಜಾ) | 5 | 3.75 |
| | | 128 | ಕೆಜಿಎಫ್ (ಪ.ಜಾ) | 5 | 3.75 |
| | | 129 | ಬಂಗಾರಪೇಟೆ (ಪ.ಜಾ) | 5 | 3.75 |
| | | 130 | ಕೋಲಾರ | 5 | 3.75 |
| | | 131 | ಮಾಲೂರು | 5 | 3.75 |
| 21 | ಬೆಂಗಳೂರು ನಗರ | 132 | ಆನೇಕಲ್ | 5 | 3.75 |
| | | 133 | ಬೆಂಗಳೂರು ದಕ್ಷಿಣ | 5 | 3.75 |
| | | 134 | ಬ್ಯಾಟರಾಯನಪುರ | 5 | 3.75 |
| | | 135 | ಮಹದೇವಪುರ | 5 | 3.75 |
| | | 136 | ಯಲಹಂಕ | 5 | 3.75 |
| | | 137 | ಯಶವಂತಪುರ | 5 | 3.75 |
| 22 | ಬೆಂಗಳೂರು ಗ್ರಾಮಾಂತರ | 138 | ದೇವನಹಳ್ಳಿ (ಪ.ಜಾ) | 5 | 3.75 |
| | | 139 | ದೊಡ್ಡಬಳ್ಳಾಪುರ | 5 | 3.75 |
| | | 140 | ಹೊಸಕೋಟೆ | 5 | 3.75 |
| | | 141 | ನೆಲಮಂಗಲ (ಪ.ಜಾ) | 5 | 3.75 |
| 23 | ರಾಮನಗರ | 142 | ಮಾಗಡಿ | 5 | 3.75 |
| | | 143 | ರಾಮನಗರ | 5 | 3.75 |
| | | 144 | ಕನಕಪುರ | 5 | 3.75 |
| | | 145 | ಚನ್ನಪಟ್ಟಣ | 5 | 3.75 |
| 24 | ಮಂಡ್ಯ | 146 | ಮಳವಳ್ಳಿ (ಪ.ಜಾ) | 5 | 3.75 |
| | | 147 | ಮದ್ದೂರು | 5 | 3.75 |
| | | 148 | ಮೇಲುಕೋಟೆ | 5 | 3.75 |
| | | 149 | ಮಂಡ್ಯ | 5 | 3.75 |
| | | 150 | ಶ್ರೀರಂಗಪಟ್ಟಣ | 5 | 3.75 |
| | | 151 | ನಾಗಮಂಗಲ | 5 | 3.75 |
| | | 152 | ಕೃಷ್ಣರಾಜಪೇಟೆ | 5 | 3.75 |
| 25 | ಹಾಸನ | 153 | ಶ್ರವಣಬೆಳಗೊಳ | 5 | 3.75 |
| | | 154 | ಅರಸೀಕೆರೆ | 5 | 3.75 |
| | | 155 | ಬೇಲೂರು | 5 | 3.75 |
| | | 156 | ಹಾಸನ | 5 | 3.75 |
| | | 157 | ಹೊಳೆನರಸೀಪುರ | 5 | 3.75 |
| | | 158 | ಅರಕಲಗೂಡು | 5 | 3.75 |
| | | 159 | ಸಕಲೇಶಪುರ (ಪ.ಜಾ) | 5 | 3.75 |
| 26 | ದಕ್ಷಿಣ ಕನ್ನಡ ಜಿಲ್ಲೆ | 160 | ಬೆಳ್ತಂಗಡಿ | 5 | 3.75 |
| | | 161 | ಮೂಡಬಿದ್ರಿ | 5 | 3.75 |
| | | 162 | ಮಂಗಳೂರು ನಗರ ಉತ್ತರ | 5 | 3.75 |
| | | 163 | ಮಂಗಳೂರು ನಗರ ದಕ್ಷಿಣ | 5 | 3.75 |
| | | 164 | ಬಂಟ್ವಾಳ | 5 | 3.75 |
| | | 165 | ಪುತ್ತೂರು | 5 | 3.75 |
| | | 166 | ಸುಳ್ಯ (ಪ.ಜಾ) | 5 | 3.75 |

| | | | | | |
|---|---|---|---|---|---|
| 27 | ಕೊಡಗು | 167 | ಮಡಿಕೇರಿ | 5 | 3.75 |
| | | 168 | ವಿರಾಜಪೇಟೆ | 5 | 3.75 |
| 28 | ಮೈಸೂರು | 169 | ಪಿರಿಯಾಪಟ್ಟಣ | 5 | 3.75 |
| | | 170 | ಕೃಷ್ಣರಾಜನಗರ | 5 | 3.75 |
| | | 171 | ಹುಣಸೂರು | 5 | 3.75 |
| | | 172 | ಹೆಚ್.ಡಿ.ಕೋಟೆ (ಪ.ಪಂ) | 5 | 3.75 |
| | | 173 | ನಂಜನಗೂಡು (ಪ.ಜಾ) | 5 | 3.75 |
| | | 174 | ಚಾಮುಂಡೇಶ್ವರಿ | 5 | 3.75 |
| | | 175 | ವರುಣ | 5 | 3.75 |
| | | 176 | ಟಿ.ನರಸೀಪುರ (ಪ.ಜಾ) | 5 | 3.75 |
| 29 | ಚಾಮರಾಜ ನಗರ | 177 | ಹನೂರು | 5 | 3.75 |
| | | 178 | ಕೊಳ್ಳೇಗಾಲ (ಪ.ಜಾ) | 5 | 3.75 |
| | | 179 | ಚಾಮರಾಜನಗರ | 5 | 3.75 |
| | | 180 | ಗುಂಡ್ಲುಪೇಟೆ | 5 | 3.75 |
| 30 | ಯಾದಗಿರ್ | 181 | ಗುರುಮಿಟ್ಕಲ್ | 5 | 3.75 |
| | | 182 | ಶಹಾಪುರ್ | 5 | 3.75 |
| | | 183 | ಶೋರಾಪುರ್ | 5 | 3.75 |
| | | 184 | ಯಾದಗಿರ್ | 5 | 3.75 |
| ಒಟ್ಟು | | | | **920** | **690** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ & ಪಘಅಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಅನುಬಂಧ–2

### 2014–15ನೇ ಸಾಲಿನಿಂದ ಆರಂಭವಾಗುವ ಗ್ರಾಮ ವಿಕಾಸ ಯೋಜನೆಗೆ ಸಂಪೂರ್ಣ ಎರಡು ತಾಲ್ಲೂಕುಗಳನ್ನೊಳಗೊಂಡ ಗ್ರಾಮೀಣ ಮತಕ್ಷೇತ್ರಗಳಿಗೆ ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ

| ಕ್ರ ಸಂ. | ಜಿಲ್ಲೆಗಳ ಹೆಸರು | ಗ್ರಾಮೀಣ ವಿಧಾನಸಭಾ ಕ್ಷೇತ್ರದ ಹೆಸರು | ಗ್ರಾಮೀಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳ ವಿವರ | ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಗರಿಷ್ಠ 8000 ಜನಸಂಖ್ಯೆಯನ್ನು ಮಿತಿಗೊಳಿಸಿ ಹಂಚಿಕೆ ಮಾಡಬಹುದಾದ ಸಂಭವನೀಯ ಗರಿಷ್ಠ ಗ್ರಾಮಗಳ ಸಂಖ್ಯೆ | ತಲಾನುದಾನ ರೂ.7,500/– ರಂತೆ ಗರಿಷ್ಠ 8000 ಜನಸಂಖ್ಯೆಯ ಮಿತಿಯುಳ್ಳ ಒಟ್ಟು ಗ್ರಾಮಗಳಿಗೆ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಅನುದಾನ (ರೂ.ಕೋಟಿಗಳಲ್ಲಿ) |
|---|---|---|---|---|---|
| 1 | ಉತ್ತರ ಕನ್ನಡ | 1. ಹಳಿಯಾಳ | 1. ಸೂಪಾ<br>2. ಹಳಿಯಾಳ | 8 | 6.00 |
| | | 2. ಕಾರವಾರ | 1. ಕಾರವಾರ<br>2. ಅಂಕೋಲಾ | 8 | 6.00 |
| | | 3. ಯಲ್ಲಾಪುರ | 1. ಯಲ್ಲಾಪುರ<br>2. ಮುಂಡಗೋಡ<br>3. ಸಿರಸಿ ತಾಲ್ಲೂಕಿನ ಭಾಗ | 8 | 6.00 |
| 2 | ಚಿಕ್ಕಮಗಳೂರು | 4. ಶೃಂಗೇರಿ | 1. ಶೃಂಗೇರಿ<br>2. ಕೊಪ್ಪ<br>3. ನರಸಿಂಹರಾಜಪುರ<br>4. ಚಿಕ್ಕಮಗಳೂರು ತಾಲ್ಲೂಕು ಭಾಗ | 8 | 6.00 |
| 3 | ಚಿಕ್ಕಬಳ್ಳಾಪುರ | 5. ಬಾಗೇಪಲ್ಲಿ | 1. ಗುಡಿಬಂಡೆ<br>2. ಬಾಗೇಪಲ್ಲಿ | 8 | 6.00 |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ & ಪಘಅಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಗ್ರಾಮ ವಿಕಾಸ ಯೋಜನೆಯನ್ನು ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ :** ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:50:ಸುಗ್ರಾಯೋ:2014 ದಿ:20.10.2014.

## ತಿದ್ದುಪಡಿ ಆದೇಶ

ಪ್ರಸ್ತಾವನೆ:

ಉಲ್ಲೇಖಿತ ಆದೇಶದಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ತಿಳಿಸಲಾಗಿದ್ದು, ಸದರಿ ಆದೇಶದಲ್ಲಿ ಪೂರ್ಣ 2 ತಾಲ್ಲೂಕುಗಳನ್ನು ಹೊಂದಿರುವ ಸಕಲೇಶಪುರ ವಿಧಾನಸಭಾ ಕ್ಷೇತ್ರವು ಕೈಬಿಟ್ಟು ಹೋಗಿರುವುದರಿಂದ ಈಗಾಗಲೇ ಹೊರಡಿಸಿದ ಅಂಶಗಳ ಜೊತೆಗೆ ಈ ಕೆಳಗಿನ ಕಂಡಿಕೆಯನ್ನು ಸೇರ್ಪಡೆ ಮಾಡಿ ತಿದ್ದುಪಡಿ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:50:ಸುಗ್ರಾಯೋ:2014,ಬೆಂಗಳೂರು, ದಿನಾಂಕ: 17 ನವೆಂಬರ್ 2014**

ಪ್ರಸ್ತಾವನೆಯಲ್ಲಿ ವಿವರಿಸಿದದಂತೆ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸುವುದರೊಂದಿಗೆ ಪೂರ್ಣ 2 ತಾಲ್ಲೂಕುಗಳನ್ನು ಹೊಂದಿರುವ ಸಕಲೇಶಪುರ ವಿಧಾನಸಭಾ ಕ್ಷೇತ್ರಕ್ಕೆ ಈಗಾಗಲೇ 5 ಗ್ರಾಮಗಳಿಗೆ ರೂ.3.75 ಕೋಟಿ ಹಂಚಿಕೆ ಮಾಡಿರುವುದರ ಜೊತೆಗೆ ಹೆಚ್ಚುವರಿಯಾಗಿ ಇನ್ನು 3 ಗ್ರಾಮಗಳಿಗೆ ರೂ.2.25 ಕೋಟಿಗಳನ್ನು ಹಂಚಿಕೆ ಮಾಡಿ ಒಟ್ಟು 8 ಗ್ರಾಮಗಳಿಗೆ ರೂ.6.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ & ಪಘಅಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ರಾಜ್ಯದ ಜನರಿಗೆ ನೀರ್ ಸಾಬ್ ಎಂದೆ ಪ್ರಖ್ಯಾತರಗಿದ್ದ. ಪಂ.ರಾಜ್ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರ ಜನ್ಮ ದಿನಾಚರಣೆಯನ್ನು ಪಾಲಿಬೆಟ್ಟ ಗ್ರಾಮ ಪಂಚಾಯತಿಯಲ್ಲಿ ಅಚರಿಸಲಾಯಿತು.



ಮಕ್ಕಳ ಹಕ್ಕುಗಳ ಗ್ರಾಮಸಭೆಯನ್ನು ಗದಗ ಜಿಲ್ಲೆ, ಗದಗ ತಾಲ್ಲೂಕಿನ, ಅಡವಿಸೋಮಾಪುರ ಗ್ರಾಮ ಪಂಚಾಯತಿಯಲ್ಲಿ ನಡೆಸಲಾಯಿತು.



**KARNATAKA VIKAS : MARCH 2015**

A Monthly Magazine for Rural Development and Panchayat Raj Department, Government of Karnataka
Regd No. KA/ BGGPO/2531/2015-17, Licence to Post "without Prepayment" WPP-32
RNI No. : 28103/1974 Total No. of Pages 52, Posted at Bengaluru GPO on 9th, 10th, 11th of Every Month




Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambedkar Veedhi,
Bengaluru - 560 001.

Printed by
The Director,
**Government Press**
Bengaluru, Karnataka.

Price : ₹ 10.00
ಬೆಲೆ : ₹ 10.00